
ಜನಪದ ಧರ್ಮ



ಡಾ. ಹಿ. ಶಿ. ರಾಮಚಂದ್ರೇಗೌಡ





ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಜನಪದ ಧರ್ಮ

ಡಾ. ಹಿ. ಶಿ. ರಾಮಚಂದ್ರೇಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪

JANAPADA DHARMA- By **Dr. Hi. Shi. Ramachandre Gowda**
Published by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033. Janapada Loka : 27201143.

ಪ್ರಥಮ ಮುದ್ರಣ : ೨೦೧೨ ಪುಟಗಳು : ೩೮

ಪ್ರತಿಗಳು : ೧೦೦೦

ಬೆಲೆ : **ರೂ. ೨೦** (ಇಪ್ಪತ್ತು ರೂಪಾಯಿಗಳು)

ಮುದ್ರಕರು :

ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ- ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು- ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ಜಾನಪದ ವಿದ್ವಾಂಸರಾದ **ಡಾ. ಹಿ. ಶಿ. ರಾಮಚಂದ್ರೇಗೌಡ** ಅವರು **ಜನಪದ ಧರ್ಮ** ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಟಿ. ತಿಮ್ಮೇಗೌಡ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೫-೦೪-೨೦೧೨

ಜನಪದ ಧರ್ಮ

1. ಧರ್ಮ : ಹುಡುಕಾಟ

ಧರ್ಮಕ್ಕಾಗಿ ತಲೆಕೆಡಿಸಿಕೊಂಡವರು, ತಲೆ ಕಳೆದುಕೊಂಡವರು ಹಲವು ಮಂದಿ. ಕರ್ನಾಟಕದ ಅಣ್ಣಿಗೇರಿಯಲ್ಲಿ ದೊರೆತ ತಲೆಬುರುಡೆಗಳ ಸಂಖ್ಯೆ ಮತ್ತು ಸ್ವರೂಪವನ್ನು ನೋಡಿದರೆ ಧರ್ಮದ ಭಯಾನಕ ಸ್ವರೂಪ ಅರ್ಥವಾಗುತ್ತದೆ. 'ಧರ್ಮವನ್ನು ರಕ್ಷಿಸುವುದರಿಂದ ಅದು ನಮ್ಮನ್ನು ರಕ್ಷಿಸುತ್ತದೆ' ಎಂಬುದು ಧರ್ಮದ ಅರ್ಥ, ಸ್ವರೂಪ ಮತ್ತು ಸ್ವಭಾವವನ್ನು ನಮಗೆ ಮನದಟ್ಟು ಮಾಡಿಕೊಡುತ್ತದೆ. ಈ ಧರ್ಮ ನಿರ್ವಚನವನ್ನು ಒಳಹೊಕ್ಕು ನೋಡಿದಾಗ ಅದರಿಂದ ಧರ್ಮ ಏನು ಎಂದು ಗೊತ್ತಾಗುವುದಿಲ್ಲ. ಬದಲಾಗಿ ಅದರ ಕಾರ್ಯ ಏನು ಎಂದು ತಿಳಿಯುತ್ತದೆ. ಧರ್ಮ ಅನ್ನುವುದೊಂದು ಇದೆ. ಅದನ್ನು ನಾವು ರಕ್ಷಿಸಬೇಕು. ಹಾಗೆ ಅದನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಇದು ಪರಸ್ಪರ ಎಂಬ ಪ್ರಜಾಪ್ರಭುತ್ವ ತತ್ವವಾದ. 'ನೀ ನನಗಿದ್ದರೆ ನಾ ನಿನಗೆ' ಎಂಬುದನ್ನು ಜ್ಞಾಪಕಕ್ಕೆ ತರುತ್ತದೆ. ಹಾಗಿದ್ದಲ್ಲಿ ಧರ್ಮ ಪ್ರಜಾಪ್ರಭುತ್ವ ತತ್ವ, ಅದನ್ನು ಪ್ರಜೆಗಳು ಮಾಡಿಕೊಳ್ಳಬೇಕು ಮತ್ತು ನೋಡಿಕೊಳ್ಳಬೇಕು. ಹಾಗೆ ಮಾಡಿದರೆ ಅದೂ ಕೂಡ ನಮ್ಮನ್ನು ನೋಡಿಕೊಳ್ಳುತ್ತದೆ.

ಅಂದ ಹಾಗೆ ಧರ್ಮ ಮನುಷ್ಯನಂತೆ ಸ್ವತಂತ್ರ ಅಸ್ತಿತ್ವವಲ್ಲ. ಅದು ಮನುಷ್ಯ ತನಗಾಗಿ ಮಾಡಿಕೊಂಡದ್ದು; ಮನುಷ್ಯ ಅದನ್ನು ಉಳಿಸಿದರೆ ಅದು ಉಳಿಯುತ್ತದೆ. ಇಲ್ಲದಿದ್ದಲ್ಲಿ ಇಲ್ಲ. ಅಂಥ ಅಸ್ತಿತ್ವದಲ್ಲಿ ಇಲ್ಲದ, ಅಸ್ವತಂತ್ರವಾದ ಧರ್ಮವನ್ನು ಉಳಿಸಿಕೊಳ್ಳುವುದಾದರೂ ಯಾಕೆ ? ಅದು ಏನು ? ಅದರ ಅಗತ್ಯ ಏನು ಮತ್ತು ಯಾಕೆ ? ಈ ಎಲ್ಲ

ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದೇ ಧರ್ಮದ ಹುಡುಕಾಟವಾಗುತ್ತದೆ. ಈ ದೃಷ್ಟಿಯಿಂದ ಧರ್ಮ ಹುಡುಕಾಟವೇ ಹೊರತು ಒಂದು ನಿರ್ದಿಷ್ಟ ಸ್ಥಿತಿ ಅಲ್ಲ.

ಹಾಗಿದ್ದಲ್ಲಿ ನಾವು ಹುಡುಕಾಡುತ್ತಿರುವ ಈ ಧರ್ಮ ಯಾವುದು? ಜಗತ್ತಿನಲ್ಲಿ ನಿರ್ದಿಷ್ಟ ಸ್ಥಿತಿ ಇರುವುದು ಭೌತಿಕ ವಸ್ತುಗಳಿಗೆ. ಮನಸ್ಸು ಎಂಬುದು ಅಂಥ ನಿರ್ದಿಷ್ಟ ಸ್ಥಿತಿ ಅಲ್ಲ. ವಸ್ತು ಜಗತ್ತಿನ ಬದಲಾವಣೆಯ ಜೊತೆಗೆ ಮನಸ್ಸಿನ ಸ್ಥಿತಿ ಬದಲಾಗುತ್ತಿರುತ್ತದೆ. ಸೂರ್ಯ, ಚಂದ್ರ ಮತ್ತು ಭೂಮಿಯ ವಸ್ತುಸ್ಥಿತಿ ತಿಳಿಯದಿದ್ದಾಗ ಸೂರ್ಯ ಮತ್ತು ಚಂದ್ರರು ಹುಟ್ಟುತ್ತಾರೆ ಮತ್ತು ಮುಳುಗುತ್ತಾರೆ ಎಂದು ತಿಳಿಯಲಾಗಿತ್ತು. ಅದಕ್ಕೆ ಅನುಗುಣವಾಗಿ ನಮ್ಮ ಪುರಾಣ–ಪುಣ್ಯಕಥೆಗಳು ಹುಟ್ಟಿಕೊಂಡಿದ್ದವು. ಅವುಗಳೇ ನಮ್ಮ ಧಾರ್ಮಿಕ ಚಟುವಟಿಕೆಗಳಾಗಿದ್ದವು. ಸೂರ್ಯ, ಚಂದ್ರ ಮತ್ತು ಭೂಮಿಯನ್ನು ಕುರಿತ ಈಗಿನ ವಸ್ತುಸ್ಥಿತಿಯೇ ಬೇರೆಯಿದೆ. ಆದರೆ ಈ ಹೊತ್ತಿನ ಆ ಸ್ಥಿತಿಯನ್ನು ಅವಲಂಬಿಸಿ ಪುರಾಣವಾಗಲೀ, ಪುಣ್ಯ ಕಥೆಗಳಾಗಲೀ ಹುಟ್ಟಿಕೊಂಡಿಲ್ಲ ಕಾರಣ ಏನಿರಬಹುದು !

ಯಾವ ಪುರಾಣ ಅಥವಾ ಧರ್ಮ ವಾಸ್ತವತೆಯನ್ನು ಅವಲಂಬಿಸದೆ ಕಲ್ಪಿಸಿಕೊಂಡು ಹುಟ್ಟಿತೋ ಅದು ಕಾಲ್ಪನಿಕ ಪುರಾಣ ಅಥವಾ ಧರ್ಮ. ಆದರೂ ಅವುಗಳಲ್ಲಿ ಕೆಲಮಟ್ಟಿನ ವಾಸ್ತವ ಇರುತ್ತದೆ. ಉದಾಹರಣೆಗೆ ರಾಮಾಯಣ ಮತ್ತು ಮಹಾಭಾರತಗಳು ಭಾರತದ ಪುರಾಣಗಳು. ಅವು ಹುಟ್ಟಿನಲ್ಲಿ ವಾಸ್ತವ ಇರಬಹುದು. ಬೆಳವಣಿಗೆಯಲ್ಲಿ ನಾನಾ ಕಥೆ, ಕಟ್ಟುಕಥೆ ಮತ್ತು ಉಪಕಥೆಗಳನ್ನು ಸೇರಿಸಿಕೊಂಡು ಅನಂತಕಾಲದ ಪುರಾಣಗಳಾಗಿವೆ. ಈಗ ಪುರಾಣವನ್ನು ಕುರಿತ ಹೊಸ ಮಾತೊಂದು ಹುಟ್ಟಿಕೊಂಡಿದೆ. ಪುರಾಣ ಹೇಳುವುದಕ್ಕೆ, ಬದನೆಕಾಯಿ ತಿನ್ನುವುದಕ್ಕೆ ಎಂಬುದೆ ಆ ಮಾತು. ಪುರಾಣ ಕಲ್ಪನೆ, ಬದನೆಕಾಯಿ ವಾಸ್ತವ ಎಂಬುದು ಇದರ ಅರ್ಥ. ಅಂದಮಾತ್ರಕ್ಕೆ, ರಾಮಾಯಣ, ಮಹಾಭಾರತದ ಪಾತ್ರಗಳನ್ನು ಪೂಜಿಸುವವರ, ಆಚರಿಸುವವರ ಸಂಖ್ಯೆಯೇನೂ

ಕಡಿಮೆಯಾಗಿಲ್ಲ. ಹಾಗಿದ್ದೂ ಬಹುಜನರು ಒಪ್ಪುತ್ತಾರೆ ಎಂಬ ಕಾರಣಕ್ಕೆ ಒಂದು ಸ್ಥಿತಿ ಅಥವಾ ವಸ್ತುವನ್ನು ಕುರಿತ ಜ್ಞಾನ ವಾಸ್ತವ ಆಗುವುದಿಲ್ಲ.

ಈಗ ನಮ್ಮ ನಡುವೆ ವಿಜ್ಞಾನವಿದೆ. ಇದು ವಸ್ತುಸ್ಥಿತಿಯನ್ನು ಕುರಿತ ಪರಾಮರ್ಶಿತ ಜ್ಞಾನ. ಈ ಜಗತ್ತು ಭೌತಿಕ ವಸ್ತುಗಳಿಂದ ಕೂಡಿದೆ. ಪ್ರತಿಯೊಂದು ಭೌತಿಕ ವಸ್ತುವೂ ಕಾರ್ಯ–ಕಾರಣದ ಮೇಲೆ ಅಸ್ತಿತ್ವದಲ್ಲಿದೆ. ಈ ಭೌತಿಕ ಜಗತ್ತು ಮತ್ತು ಅದರೊಳಗಿನ ಭೌತಿಕ ವಸ್ತುಗಳ ಅನುಭೋಗದಿಂದ ಜೀವಜಗತ್ತು ಅಸ್ತಿತ್ವದಲ್ಲಿದೆ. ಈ ಭೌತಿಕ ಜಗತ್ತಿನ ಉಳಿವಿನೊಂದಿಗೆ ಮನುಷ್ಯನ ಉಳಿವು ಇದೆ. ಅದರ ನಾಶದೊಂದಿಗೆ ಅವನ ಅಳಿವೂ ಖಂಡಿತ. ಇದರ ಹೊರತು ಅವನು ಕಲ್ಪಿಸಿಕೊಂಡುದೆಲ್ಲ ಅವನ ಮನೋಸಾಮಗ್ರಿಯಷ್ಟೆ ಎಂಬುದು ವಿಜ್ಞಾನದ ಶೋಧ.

2. ಧರ್ಮ : ರಹಸ್ಯ

ಹಾಗಿದ್ದಲ್ಲಿ ಮನುಷ್ಯ ಧರ್ಮ, ಪುರಾಣ, ಕಥೆ, ಶಾಸ್ತ್ರ ಇಂಥವನ್ನೆಲ್ಲ ಯಾಕೆ ಸೃಷ್ಟಿಸಿಕೊಂಡ ಎಂಬುದು ದೊಡ್ಡ ಪ್ರಶ್ನೆ. ನಿಜದಲ್ಲಿ ಇವೆಲ್ಲ ಭೌತಿಕ ಜಗತ್ತಿನ ಹೊರಗೆ ಇಲ್ಲ. ಇವೆಲ್ಲ ಮನುಷ್ಯ ಭೌತಿಕ ಜಗತ್ತಿಗೆ ಬೇರೆ ಬೇರೆ ಕಾಲಗಳಲ್ಲಿ ತೋರಿದ ಪ್ರತಿಕ್ರಿಯೆಯ ಪರಿಣಾಮಗಳು. ಆದಿಮಾನವನಿಂದ ಹಿಡಿದು ಈ ಹೊತ್ತಿನ ವೈಜ್ಞಾನಿಕ ಜಗತ್ತಿನವರೆಗೆ ಮನುಷ್ಯ ಭೌತಿಕ ಜಗತ್ತಿಗೆ ನಾನಾ ರೀತಿಯ ಪ್ರತಿಕ್ರಿಯೆಯನ್ನು ತೋರುತ್ತಲೇ ಬಂದಿದ್ದಾನೆ. ಆದಿಮಾನವ ತನ್ನ ತಿಳುವಳಿಕೆಯ ಮಿತಿಯಲ್ಲಿ ಭೌತಿಕ ಜಗತ್ತಿಗೆ ಪ್ರತಿಕ್ರಿಯೆ ತೋರಿದ. ಈಗಿನ ಮಾನವ ತನ್ನ ಹೊಸ ಅರಿವಿನ ಸಂದರ್ಭದಲ್ಲಿ ಪ್ರಕೃತಿಗೆ ಪ್ರತಿಕ್ರಿಯೆ ನೀಡುತ್ತಿದ್ದಾನೆ. ಪ್ರಕೃತಿಯನ್ನು ಉಳಿಸುವ ಅಥವಾ ನಾಶಮಾಡುವ ಮೂಲಕ ತಾನು ಏನಾಗುತ್ತೇನೆ ಎಂಬುದನ್ನು ಕಂಡುಕೊಳ್ಳುತ್ತಿದ್ದಾನೆ. ಅಂದು ಆದಿಮಾನವ ಪ್ರಕೃತಿಗೆ ತೋರಿದ ಪ್ರತಿಕ್ರಿಯೆಯಿಂದಾಗಿ ತನಗಿಂತ ಪ್ರಬಲವಾದ ಶಕ್ತಿ ಮತ್ತು ಲೋಕ ಪ್ರಕೃತಿಯಲ್ಲಿದೆ ಎಂದು ಹೇಳಿಕೊಂಡ. ಆ ಹೇಳಿಕೊಂಡ ಕಥೆಯೆ ಅವನ ಪುರಾಣವಾಯಿತು. ಅದರೊಂದಿಗೆ ಹೊಂದಿಕೊಂಡು ಬದುಕುವ ನಡವಳಿಕೆಯೆ ಅವನ ಧರ್ಮವಾಯಿತು.

ಆದಿಮಾನವ ಪ್ರಕೃತಿಯ ಪ್ರತಿಯೊಂದು ಚರಾಚರ ವಸ್ತುವಿನಲ್ಲಿಯೂ 'ಚೈತನ್ಯ'ವಿದೆ ಎಂಬುದನ್ನು ಕಂಡುಕೊಂಡ. ಆ ಚೈತನ್ಯ ಅವನಿಗೆ ಭೌತಿಕ ಆಗಿರಲಿಲ್ಲ; ಅದು ತನಗೆ ಕಾಣುವ ವಸ್ತುಸ್ಥಿತಿಗಿಂತ ಬೇರೆಯಾದುದು, ಅತೀತವಾದುದು ಎಂದು ಅಂದುಕೊಂಡ. ಈ ಚೈತನ್ಯವೇ ಅವನು ಗುರುತಿಸಿಕೊಂಡ ಮಹಾನ್ ಶಕ್ತಿ. ಅದೇ ಅವನ ದೇವರು. ಆ ಚೈತನ್ಯ ಒಂದೇ ಒಂದು, ಏಕಸ್ವರೂಪಿ ಎಂದು ಅವನು ಗುರುತಿಸಿಕೊಂಡುದಲ್ಲ. ಎಲ್ಲೆಲ್ಲಿ, ಹೇಗೆ ಹೇಗೆ ಆ ಚೈತನ್ಯ ಕಾಣುತ್ತದೋ ಅದೆಲ್ಲ ಅವನ ದೃಷ್ಟಿಯಲ್ಲಿ ಮಹಾಶಕ್ತಿ. ಅದರಿಂದ ರಕ್ಷಣೆ, ಸಂರಕ್ಷಣೆ, ಸಹಾಯ ಪಡೆಯುವ ಕ್ರಮವೇ ಅವನ ಪೂಜೆ, ಪುರಸ್ಕಾರ ಮತ್ತು ಶರಣಾಗತಿಯಾಯಿತು. ಬಹಳ ಕಾಲದವರೆಗೆ ಮನುಷ್ಯನಲ್ಲಿ ಇದ್ದ ನಂಬಿಕೆ ಎಂದರೆ ಈ ಚೈತನ್ಯವನ್ನು ಕುರಿತದ್ದು. ತನ್ನ ಶಕ್ತಿಗೆ ಮೀರಿದ ಮತ್ತು ತಾನು ಅವುಗಳನ್ನು ಪಡೆಯಲು ಹೊಂದಾಣಿಕೆ ಮಾಡಿಕೊಳ್ಳಬಹುದಾದ ಎಲ್ಲ ವಸ್ತುಗಳೂ ಅವನನ್ನು ಅಚ್ಚರಿ ಮತ್ತು ಭಯದಲ್ಲಿ ಉಳಿಸಿದವು. ಅವನನ್ನು ಅವುಗಳಿಗೆ ತಲೆ ಬಾಗುವಂತೆ ಮಾಡಿದವು.

ಈ ಹಂತದಲ್ಲಿ ದೇವರು, ಧರ್ಮ ಮತ್ತು ಪೂಜೆಯ ಪ್ರವೇಶ ಇರಲಿಲ್ಲ. ಪ್ರಕೃತಿಯ ಬೇರೆ ಬೇರೆ ಚೈತನ್ಯವನ್ನು ಬೇರೆ ಬೇರೆ ಶಕ್ತಿಯ ರೂಪದಲ್ಲಿ ಗುರುತಿಸಿ ಗೌರವಿಸುವ ಮತ್ತು ಅದರ ಪರಾಕ್ರಮವನ್ನು ಹೊಗಳುವ ನಡವಳಿಕೆಯೆ ಮುಖ್ಯವಾಗಿತ್ತು. ಆದಿವಾಸಿಗಳ ಜೀವನ ಚಕ್ರದಲ್ಲಿ ನಾವು ಇದನ್ನು ಗುರುತಿಸಬಹುದು. ಹಲವು ಶಕ್ತಿಗಳು ಅವರ ಸುತ್ತಮುತ್ತ ಇದ್ದವು. ಅಂಥ ಶಕ್ತಿಗಳ ಆರಾಧನೆ ಮತ್ತು ಆವಾಹನೆ ಮನುಷ್ಯನ ನಡವಳಿಕೆಯಾಯಿತು. ಇದರ ಪರಿಣಾಮವೇ ನೂರಾರು ಪ್ರಾಕೃತಿಕ ಮತ್ತು ಕಾಲ್ಪನಿಕ ಶಕ್ತಿಗಳ ಉಗಮವಾಯಿತು. ಹೆಚ್ಚು ಶಕ್ತಿಶಾಲಿಯಾದವನು ನಾಯಕನಾದ. ಉಳಿದವರು ಅವನ ಅನುಯಾಯಿ ಗಳಾದರು. ಗುಂಪುಗಳು ಹುಟ್ಟಿಕೊಂಡವು. ಸಾಂಸ್ಕೃತಿಕ ನಾಯಕನ ಉದಯವೂ ಆಯಿತು.

ಇಂಥ ಸಾಂಸ್ಕೃತಿಕ ನಾಯಕನ–ನಾಯಕರ ಬೆಳವಣಿಗೆಯ ರೂಪವೇ ದೇವರು. ಅದರ ರಕ್ಷಾ ಕವಚವೇ ಧರ್ಮ.

3. ಧರ್ಮ : ಖಾಸಗಿತನ

ಆದರೆ ಈ ದೇವರು ಮತ್ತು ಧರ್ಮ ಖಾಸಗಿ ಅಲ್ಲ. ಜನಪದರು ಅಂದುಕೊಂಡದ್ದು ಮತ್ತು ಆಚರಿಸಿದ್ದು. ದೇವರು ಮತ್ತು ಧರ್ಮ ಖಾಸಗಿಯಾದಂತೆಲ್ಲ ಜನಪದ ಧರ್ಮ ನೆಲದಲ್ಲಿ ಉಳಿಯಿತು. ಖಾಸಗಿ ಆಸ್ತಿ, ಆಚರಣೆ ಮಾಡಿಕೊಂಡ ದೇವರು, ಧರ್ಮಗಳು ಉದ್ದಿಮೆಗಳಾದವು. ಮೈಮೇಲೆ ಬಂದು ನಿಂತವು. ಮೆರವಣಿಗೆಯಾದವು. ಆವರಣವನ್ನು ನಿರ್ಮಿಸಿಕೊಂಡವು. ಅವುಗಳ ಆವರಣದೊಳಗೆ ಉಳಿದವರು ತನ್ನವರಾದರು, ಹೊರಗೆ ನಿಂತವರು ಅನ್ಯರಾದರು. ಇದು ಧರ್ಮ ಅಧರ್ಮವಾದ ಬಗೆ. ದೇವರು, ಧರ್ಮವನ್ನು ಪಾಲು–ಪಾರೀಕತ್ತು ಮಾಡಿಕೊಂಡಾಗ ಹೀಗಾಗುತ್ತದೆ. ಹಿಂದೂ ಧರ್ಮ ಎಂಬುದು ಯಾಹೊತ್ತೂ ಹೀಗೇ ಇದೆ. ಅದು ಮಾನವ ಧರ್ಮ ಅನ್ನಿಸಿಕೊಳ್ಳದಿರುವುದರಿಂದಲೇ ಅದರೊಳಗೆ ಜನ ತಾರತಮ್ಯತೆಯಿಂದ ಬದುಕುತ್ತಾರೆ. ಅದನ್ನು ನಿವಾರಿಸಿಕೊಳ್ಳಲು ಸದಾ ಜಗಳವಾಡುತ್ತಾರೆ. ದೇವರು ಮತ್ತು ಧರ್ಮವನ್ನು ಕುರಿತ ಸಿಲ್ಲಿ ನಡವಳಿಕೆಯಿದು.

ಇಂಥವೆಲ್ಲಾ ಅಲ್ಪಕಾಲಿಕ ಮತ್ತು ಅಲ್ಪಮಾನವರ ಧರ್ಮ, ದೇವರುಗಳು. ಇವುಗಳನ್ನು ಬೇಕಾದವರು ಬೇಕಾದಂತೆ ಮಾಡಿಕೊಳ್ಳಬಹುದು. ಇದು ಬ್ಯುಸಿನೆಸ್ ಟಾಕ್‌ಟಿಕ್ಸ್ ಇದ್ದ ಹಾಗೆ. ದೊಡ್ಡ ಮಾರುಕಟ್ಟೆಗಳಂಥಾಗಿರುವ ಕೆಲವು ಧಾರ್ಮಿಕ ಸ್ಥಳಗಳನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಇಂಥಲ್ಲಿ ಪುರೋಹಿತ, ಪೂಜಾರಿ, ಮುಕ್ತೇಸರ, ದೇವ ಪರಿಚಾರಕ, ಭಕ್ತ, ಭವಿ ಹೀಗೆಲ್ಲಾ ತುಂಡು ತುಂಡಾದ ಜನರಿರುತ್ತಾರೆ. ಒಟ್ಟಾಗಿ ಮನುಷ್ಯನನ್ನು ಗ್ರಹಿಸುವುದು ಇಲ್ಲಿ ಆಗದು. ಇವೆಲ್ಲ ವ್ಯಾಪಾರಿ ಧರ್ಮಗಳು ಎನ್ನಬಹುದು.

ಹಿಂದೂ ಧರ್ಮವು ಧರ್ಮವೇ ಅಲ್ಲ. ಅದೊಂದು ಮೋಸದ

ಜಾಲ. ಒಬ್ಬನಿಗೆ ಮೋಕ್ಷಕ್ಕೆ ದಾರಿ ಇದೆ, ಮತ್ತೊಬ್ಬ ಸದಾ ನಾರಕಿ. ನರಕದಲ್ಲೇ ಇರಬೇಕಾದವನು ಎಂದರೆ ಅರ್ಥವೇನು ? ಹಿಂದೂಗಳೆಲ್ಲರೂ ಬ್ರಹ್ಮನ ಮಕ್ಕಳು. ಆದರೆ ಅವರಲ್ಲಿ ಶ್ರೇಷ್ಠರು, ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂದರೆ ಅದರ ಉದ್ದೇಶವೇನು ? ಹಿಂದೂಗಳೆಲ್ಲ ಒಂದೇ. ಆದರೆ ಕೆಲವರು ಒಳಗಿನವರು ಹಲವರು ಹೊರಗಿನವರು. ಈ ಧರ್ಮದಲ್ಲಿ ಸ್ವಚ್ಛತೆಯ ಪರಿಕಲ್ಪನೆಯೇ ಇಲ್ಲ. ಬಟ್ಟೆ ಮಾತ್ರ ಮಡಿ ಮಾಡಿಕೊಂಡವರು ಸ್ವಚ್ಛರು. ಮನಸ್ಸು ಯಾಹೊತ್ತೂ ನಿಷ್ಕಲ್ಮಶವಾದ ದುಡಿಯುವವರು ಕೊಳಕರು. ಇಂಥ ಸಂಗತಿಗಳನ್ನು ಕೇಳಿದಾಗಲೆಲ್ಲಾ ಮನಸ್ಸು ಮುದುಡಿ ಹೋಗುತ್ತದೆ. ಮನಸ್ಸನ್ನು ಅರಳಿಸದಿದ್ದರೆ ಅದೆಂಥ ಧರ್ಮ ?

ಕ್ರಿಶ್ಚಿಯನ್, ಮುಸಲ್ಮಾನ ಎಂಬ ಧರ್ಮಗಳು ಕೂಡ ಯಜಮಾನ ಸ್ವರೂಪಿಯಾದವುಗಳೆ. ಅಲ್ಲಿಯೂ ವರ್ಗಗಳುಂಟು. ಅಂತರ ಪರಿಪಾಲನೆ ಉಂಟು. ಅಲ್ಲಿ ಅಸ್ಪೃಶ್ಯತೆ ಅಥವಾ ನಾರಕಿ ಪರಿಕಲ್ಪನೆ ಇಲ್ಲ. ಇಲ್ಲಿ ಕಸಕಡ್ಡಿ ಇಲ್ಲವೆಂದಲ್ಲ. ಆದರೆ ಹಿಂದೂ ಧರ್ಮದಂತೆ ಮೂಲ ಧರ್ಮ ಪರಿಕಲ್ಪನೆಯಲ್ಲಿಯೆ ದೋಖಾ ಇಲ್ಲ. ಹೀಗಿದ್ದೂ ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ, ಬೌದ್ಧ ಈ ಧರ್ಮಗಳ ಕೇಂದ್ರದಲ್ಲಿ ಯಜಮಾನನೊಬ್ಬನಿದ್ದಾನೆ. ಅವನ ಆಣತಿಯಂತೆ ಧರ್ಮ ನಿರ್ದೇಶಿತವಾಗಿದೆ. ಅಲ್ಲಿ ರಾಮಕೃಷ್ಣ–ಶಿವ, ಕ್ರಿಸ್ತ–ಮೇರಿ, ಪೈಗಂಬರ್ ಅಥವಾ ಬುದ್ಧ ಪ್ರಶ್ನಾತೀತರು. ಮೂಲ ಬೌದ್ಧ ವೈಜ್ಞಾನಿಕ–ವೈಚಾರಿಕ ಧರ್ಮ, ಜಗತ್ತಿನ ಶ್ರೇಷ್ಠ ಧರ್ಮ. ಈ ಹೊತ್ತಿನ ಬೌದ್ಧ ಧರ್ಮ ಹಿಂಸೆಯನ್ನು ಒಳಗೊಂಡಿದೆ. ಈ ಎಲ್ಲ ಧರ್ಮಗಳು ಒಬ್ಬೊಬ್ಬ ಯಜಮಾನ ದೇವರಿಂದ ಪ್ರಣೀತವಾದ ಧರ್ಮಗಳು. ಅವುಗಳ ಒಳಗೆ ಅವರ ಭಕ್ತರಿಗೆ ವಿಕಾಸದ ಮಾರ್ಗಗಳಿವೆ. ಅಕಸ್ಮಾತ್ ಅವರು ಆ ಧರ್ಮದಿಂದ ಹೊರಗೆ ಬಂದರೆ ಕೆಲವರು ಮನುಷ್ಯರು ಮಾತ್ರವಾಗುತ್ತಾರೆ. ಅಂದರೆ ಇವೆಲ್ಲ 'ಆವರಣ ಧರ್ಮ' ಮತ್ತು 'ಆವರಣ ವ್ಯಕ್ತಿತ್ವ'ಗಳನ್ನು ಮಾತ್ರ ನಿರ್ಮಿಸಬಲ್ಲವು. ಇಲ್ಲಿ ಒಟ್ಟು ಮನುಷ್ಯರ ಪರಿಕಲ್ಪನೆ ಎಂಬುದೇ ಇಲ್ಲ.

4. ಧರ್ಮ : ಪಂಥ

ಪಂಗಡ ಧರ್ಮ ಮತ್ತು ಪಂಗಡದ ನಾಯಕ ಎಂಬ ಜೀವನ ವಿಧಾನ ಯಾವ ಕಾಲದಿಂದಲೂ ಇದೆ. ಬುಡಕಟ್ಟುಗಳೆಲ್ಲ ಈ ವರ್ಗಕ್ಕೆ ಸೇರಿದವು. ಅವುಗಳದು ಯೂನಿಟರಿ ಧರ್ಮ. ಅದು ಆ ಪಂಗಡ ಒಟ್ಟಾಗಿರಲು ರೂಢಿಸಿಕೊಂಡ ಧರ್ಮ. ತನ್ನನ್ನು ಇತರ ಪಂಗಡಗಳಿಂದ ಸಂರಕ್ಷಿಸಿಕೊಳ್ಳಲು ಹಾಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹುಟ್ಟಿದ ಧರ್ಮ. ಈ ಬುಡಕಟ್ಟುಗಳು ಕಲ್ಪಿತ ಅಥವಾ ಆರೋಪಿತ ಜೀವನ ತತ್ವಕ್ಕೆ ಸೇರಿದವಲ್ಲ. ಜನಾಂಗಿಕವೂ, ಪ್ರಾದೇಶಿಕವೂ, ಕುಲಸಂಬಂಧಿ ಯಾದವೋ ಆಗಿರುತ್ತವೆ. ಕೆಲವು ಒಂದು ದೈವ ಅಥವಾ ಒಬ್ಬ ನಾಯಕನನ್ನು ನಂಬಿ ಬದುಕಿದಂಥವೂ ಹೌದು. ಆದರೆ ಈ ದೈವ – ನಾಯಕ ಕಲ್ಪಿತವಲ್ಲ, ಸ್ವಾರ್ಥವಲ್ಲ. ಮತ್ತೊಂದು ಪಂಗಡವನ್ನು ದೂರವಿಡುವ, ತಾರತಮ್ಯ ಮಾಡುವ ಅಥವಾ ನಾಶ ಮಾಡುವ ಉದ್ದೇಶವನ್ನು ಹೊಂದಿರುವುದಿಲ್ಲ. ತಮ್ಮ ಅಸ್ತಿತ್ವಕ್ಕೆ ಅಪಾಯ ಬಂದಾಗ ಇತರ ಸಮುದಾಯಗಳ ಎದುರು ಬೀಳುವುದು ಮಾತ್ರ ಇವರ ಸಾಮಾನ್ಯ ಜೀವನ ನಿಯಮವಾಗಿದೆ.

ತಮ್ಮದೇ ದೈವ ಮತ್ತು ಧರ್ಮವನ್ನು ಹೊಂದಿರುವ ವರ್ಗ ಸಮುದಾಯಗಳೂ ಇವೆ. ಇವು ಜಾತಿ–ಜನಾಂಗ–ಪಂಗಡಗಳಿಗಿಂತ ಬೇರೆಯಾದವು. ತಿರುಪತಿ, ಧರ್ಮಸ್ಥಳ, ಕೊಲ್ಲೂರು ಈ ಮುಂತಾದವು ಈ ಬಗೆಯವು. ಕಷ್ಟ ಪರಿಹಾರಾರ್ಥ ಒಂದು ವರ್ಗದ ಜನ ಇಲ್ಲಿಗೆ ಹೋಗುತ್ತಾರೆ. ಬೇರೆ ಬೇರೆ ಧರ್ಮ–ಜಾತಿಗಳಿಂದಲೂ ಇಲ್ಲಿಗೆ ಜನ ಬರುತ್ತಾರೆ. ಧಾರ್ಮಿಕ ಬದ್ಧತೆಗಿಂತಲೂ ಅನುಕೂಲ ಪಡೆಯುವುದು ಇಲ್ಲಿನ ಉದ್ದೇಶ. ವಿಶೇಷವಾಗಿ ತಿರುಪತಿ ತಿಮ್ಮಪ್ಪ ವ್ಯಾಪಾರಸ್ಥರ ದೇವತೆ ಎಂದು ಹೇಳಲಾಗುತ್ತದೆ. ಸಿರಿವಂತರನ್ನು ಅನುಸರಿಸುವುದು ಬಡವರ ಕರ್ಮ ಆಗಿರುವುದರಿಂದ ಎಲ್ಲರೂ ಅಲ್ಲಿಗೆ ಹೋಗಿ ಬರುತ್ತಾರೆ.

ಪಂಥಗಳ ಧರ್ಮ ಮತ್ತು ದೇವರುಗಳ ಬಗ್ಗೆಯೂ ಇಲ್ಲಿ

ಪ್ರಸ್ತಾಪಿಸಬೇಕು. ಒಂದು ಪ್ರಮುಖ ಧರ್ಮದೊಳಗಿನಿಂದ ಅಥವಾ ಸ್ವತಂತ್ರವಾದ ಸಮೂಹವೊಂದರಿಂದ ಈ ಪಂಥ ಧರ್ಮ ಉದಯವಾಗುತ್ತದೆ. ಹಿಂದೂ ಮುಸ್ಲಿಂ ಧರ್ಮದೊಳಗಡೆಯೆ ಇಂಥ ಪಂಥ ಧರ್ಮಗಳು ಇವೆ. ಒಂದೊಂದು ಗಟ್ಟಿಯಾದ ತಾತ್ವಿಕ ನೆಲೆಯಿಂದ ಇವು ರೂಪು ಪಡೆದಿರುತ್ತವೆ. ಮೂಲಧರ್ಮಕ್ಕಿಂತ ಹೆಚ್ಚಿನ ಮಾನವೀಯತೆಯನ್ನು ಮೆರೆಸುವ ಕಾರಣದ ಮೇಲೆ ಇವು ಕವಲೊಡೆದಿರುತ್ತವೆ.

5. ಧರ್ಮ : ಹೊಸ ಪ್ರವೃತ್ತಿ

ಇತ್ತೀಚಿನ ದಿನಗಳಲ್ಲಿ ಈ ಎಲ್ಲ ಧರ್ಮಗಳೂ ಚರ್ಚೆಗೆ ಒಳಗಾಗಿವೆ. ಸಾಂಸ್ಥಿಕ ಧರ್ಮಗಳ ಮೇಲೆ ಹೆಚ್ಚಿನ ಟೀಕೆಗಳು ಕೇಳಿಬರುತ್ತಿವೆ. ಇದು ಜಗತ್ತು ವೈಚಾರಿಕ–ವೈಜ್ಞಾನಿಕ ಚಿಂತನೆಯನ್ನು ಬೆಳೆಸಿಕೊಂಡುದರ ಫಲ ಎಂಬ ಅಭಿಪ್ರಾಯ ಒಂದು ಕಡೆಯಾದರೆ, ವ್ಯಾಪಾರಿ ಮೂಲದ ಬಳಕೆದಾರ ಸಂಸ್ಕೃತಿ ಪ್ರಬಲವಾಗುತ್ತಿರುವ ಕಾರಣ ಧಾರ್ಮಿಕ ನಂಬಿಕೆಗಳು ಅಪಾಯಕಾರಿ ಎದುರಾಳಿಯನ್ನು ಎದುರಿಸುತ್ತಿರುವುದು ಮುಖ್ಯ ಕಾರಣ ಎಂದು ಹೇಳಲಾಗುತ್ತಿದೆ. ಹೊಸ ಜಾಗತಿಕ ವಿದ್ಯಮಾನಗಳು ಮನುಷ್ಯನ ವೈಯುಕ್ತಿಕ ಹಾಗೂ ಸಾಮಾಜಿಕ ಸ್ಥಾನಮಾನವನ್ನು ಪಲ್ಲಟಗೊಳಿಸುತ್ತಿರುವುದರಿಂದ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಸ್ಥಿತ್ಯಂತರ ಕೂಡ ಅನಿವಾರ್ಯ ಎಂಬ ಪ್ರವೃತ್ತಿ ಬೆಳೆಯುತ್ತಿದೆ. ಇದು ಒಂದು ಕಡೆಯಿಂದ ಸ್ಥಿತ ಧರ್ಮಗಳ ಅಸ್ತಿತ್ವವನ್ನು ಅಲುಗಾಡಿಸುತ್ತಿದ್ದರೆ ಮತ್ತೊಂದು ಕಡೆಯಿಂದ ಧರ್ಮದ ಸಾರ್ವತ್ರಿಕ ಸ್ವರೂಪದ ಕಡೆಗೆ ಜನರು ಪಯಣಿಸುತ್ತಿದ್ದಾರೆ ಎಂಬುದು ವಾಸ್ತವ ಸಂಗತಿಯಾಗಿದೆ.

ಅಂಥ ಸಾರ್ವತ್ರಿಕ ಧರ್ಮದ ಹುಡುಕಾಟದ ಸಂದರ್ಭದಲ್ಲಿ 'ಜನಪದ ಧರ್ಮದ' ಹುಡುಕಾಟ ಈ ಹೊತ್ತಿನ ಹೊಸ ಅನ್ವೇಷಣೆಗಳಲ್ಲಿ ಒಂದಾಗಿದೆ. ಈ ಹೊತ್ತಿನ ಧಾರ್ಮಿಕ ಹಸಿವಿಗೆ ಅದೊಂದು ಪರಿಹಾರವೆ ಅಥವಾ ಅದು ಯಾಹೊತ್ತೂ ನಮ್ಮೊಂದಿಗೆ ಇರುವ ಪರಿಸ್ಥಿತಿಯೆ ? ತಿಳುವಳಿಕೆಗಾಗಿ ಈ ಪ್ರಯತ್ನ ಅಗತ್ಯವಾಗಿದೆ. ಈ ಮೊದಲೆ ಕೇಳಿಕೊಳ್ಳಬೇಕಾದ

ಪ್ರಶ್ನೆಯೆಂದರೆ ಈಗ ನಮ್ಮ ನಡುವೆ ಧಾರ್ಮಿಕ ಹಸಿವು ಇದೆಯೆ ಅಥವಾ ಧರ್ಮ ಈ ಹೊತ್ತು ಅಗತ್ಯವೆ ಎಂಬುದು. ಧಾರ್ಮಿಕ ಹಸಿವು ಈಗ ಇದೆ ಎಂದರೆ ಬಹುತೇಕರು ಅದಕ್ಕೆ ಅಸಮ್ಮತಿ ಸೂಚಿಸಬಹುದು. ಈಗೇನಿದ್ದರೂ ಅಸಮಾನ್ಯ ಜ್ಞಾನ ಮತ್ತು ಸೌಲಭ್ಯಗಳ ಹಸಿವು ಇದೆ ಎನ್ನುತ್ತಾರೆ. ಅನ್ನದ ಹಸಿವು, ಧರ್ಮದ ಹಸಿವು ಮತ್ತು ಜ್ಞಾನದ ಹಸಿವು ಎಂಬ ಬೇಡಿಕೆಗಳೇನಿದ್ದರೂ ಪ್ರಾಥಮಿಕ ಸಮಾಜಕ್ಕೆ ಸಂಬಂಧಿಸಿದವು. ಗಾಳಿ, ನೀರು, ಆಹಾರ ಎಂಬ ಜೀವ ದ್ರವ್ಯಗಳ ಬೇಡಿಕೆಯ ಸ್ಥಿತಿಯೂ ಈಗ ಇಲ್ಲ. ಅವು ಸಾಕಷ್ಟು ಪೂರೈಕೆಯಾಗಿವೆ. ಈಗೇನಿದ್ದರೂ ಹೊಸ ಸುಖಕ್ಕಾಗಿ ಹೊಸ ಸೌಲಭ್ಯಗಳ ಅನ್ವೇಷಣೆಯಲ್ಲಿದ್ದೇವೆ ಎಂದು ವಿದ್ಯಾವಂತರು ಹೇಳುತ್ತಾರೆ. ಈಗ ಅವರ ಮುಂದೆ ಯಾವ ಪ್ರಾಥಮಿಕ ಸಮಾಜವೂ ಇಲ್ಲ.

ಇದೆಲ್ಲ ಮೇಲ್ಮುಖ ಸಮಾಜದ ಬೆಳವಣಿಗೆಯ ಪ್ರವೃತ್ತಿ. ಈ ಹೊತ್ತಿನ ಆಧುನಿಕೋತ್ತರ ಅಭಿವೃದ್ಧಿ ಪರಿಕಲ್ಪನೆಯೆ ಇದಕ್ಕೆ ಕಾರಣ. ದೀಪದ ಕೆಳಗೆ ಕತ್ತಲೆ ಇರುವುದನ್ನು ಅದು ನಂಬುವುದಿಲ್ಲ. ನಮ್ಮ ಕನ್ಸಿಡರೇಷನ್ ಏನಿದ್ದರೂ ಉರಿಯುವ ದೀಪದ ಬೆಳಕಿನ ಬಗ್ಗೆ ಎನ್ನುತ್ತಾರೆ. ಆದರೆ ಸಮತಲ ಅಭಿವೃದ್ಧಿ ಚಿಂತಕನಿಗೆ ಆಧುನಿಕೋತ್ತರ ಅಭಿವೃದ್ಧಿ ನೆಲೆಗಟ್ಟಿಯಾದ ಸಮತಲದ ಮೇಲೆ ನಿಂತಿಲ್ಲ ಎನಿಸುತ್ತದೆ. ನಮ್ಮಲ್ಲಿ ಅಭಿವೃದ್ಧಿ ಹೊಂದದ ಬುಡಕಟ್ಟುಗಳಿವೆ. ಅಲೆಮಾರಿ ಸಮೂಹಗಳಿವೆ. ತಳ-ಕೆಳ ಸಮುದಾಯಗಳಿವೆ, ದಲಿತರಿದ್ದಾರೆ. ಎಲ್ಲ ಸಮುದಾಯಗಳಲ್ಲೂ ಬಹುದೊಡ್ಡದಾದ ಬಡಸಮೂಹವೊಂದು ಇದೆ. ಇವರಲ್ಲಿ ಅನೇಕರಿಗೆ ಪ್ರಾಥಮಿಕ ಅವಶ್ಯಕತೆಗಳಾದ ಶುದ್ಧ ಗಾಳಿ, ನೀರು ಮತ್ತು ಆಹಾರ ಕೂಡ ಸಿಗುತ್ತಿಲ್ಲ. ಇವರನ್ನೆಲ್ಲ ನಾಗರೀಕ ದೂರರು, ಅನಭಿವೃದ್ಧಿ ಹೊಂದಿದವರು, ಬೆಳವಣಿಗೆಗೆ ತೊಡಗಿಸಿಕೊಳ್ಳದವರು, ಮೇಲ್ಮುಖವಾಗಿ ಚಿಮ್ಮದವರು ಎಂದೆಲ್ಲ ಹೇಳಿ ಅವರು ಈ ಯುಗದಲ್ಲಿಯೆ ಇಲ್ಲ, ನಮ್ಮ ನಡುವೆಯೆ ಇಲ್ಲವೆಂಬಂಥ ಮೈಮರವೆ ಸಿದ್ಧಾಂತವನ್ನು ಹೇಳುತ್ತ ಅವರನ್ನು ದಾಟಿಕೊಂಡು ಹೋಗುವ ಪ್ರವೃತ್ತಿ ಬೆಳೆದಿದೆ.

6. ಧರ್ಮ : ಆವಿಷ್ಕಾರ

ಇದು ನಾಟಕೀಯ ಪ್ರಜೆಯ ಅವಕಾಶವಾದಿ ಸಿದ್ಧಾಂತ. ಜೀವಿ-ಜೀವನ ಅಸ್ತಿತ್ವದ ನೆಲೆಯಲ್ಲಿ ಚಿಂತಿಸುವವನಿಗೆ ಭಾರತದಂಥ ದೇಶದಲ್ಲಿ 21ನೇ ಶತಮಾನದ ಮುಖ್ಯವಾಹಿನಿಗೆ ಬಾರದೇ ಇರುವ ಜನಸಮೂಹವೇ ಅಧಿಕವಿದೆ. ಅವರು ಅಭಿವೃದ್ಧಿ ನಿರ್ಣಯದಲ್ಲಿ ಪಾಲುಗೊಳ್ಳಲು ಕಿಂಚಿತ್ತೂ ಅವಕಾಶ ಇಲ್ಲವಾಗಿ ಅಲ್ಪಸಂಖ್ಯಾತ ಅಭಿವೃದ್ಧಿ ಸಿದ್ಧಾಂತಿಗಳು ಮುಂಚೂಣಿಯಲ್ಲಿದ್ದಾರೆ. ಜೀವನವೆಂದರೆ ಓಟ ಎಂದೇ ತಿಳಿದಿರುವ ಇವರ ಮಧ್ಯೆ ಜೀವನವೆಂದರೆ ನೆಲ-ನೆಲೆ-ಸಮತಲ-ಸಂಸ್ಕೃತಿ ನಿರ್ಮಿತ ಸಮಾಜ ಎಂದು ಚಿಂತಿಸುವವರು ಮೂಕ ಪ್ರೇಕ್ಷಕರಾಗಿ ಕೂರಲು ಸಾಧ್ಯವಿಲ್ಲ. ಮೂಗುದಾರವಿಲ್ಲದ ಅಭಿವೃದ್ಧಿ ಸಿದ್ಧಾಂತಕ್ಕೆ ಮೂಗುದಾರ ಹಾಕಿ ಸಾಕು ಪ್ರಾಣಿಯನ್ನಾಗಿ ಮಾಡಿಕೊಳ್ಳುವುದು ಬಹುಜನ-ಬಹುಸಂಸ್ಕೃತಿ ಅಸ್ತಿತ್ವದ ಕಾರಣಕ್ಕಾಗಿ ಅನಿವಾರ್ಯವಾಗಿದೆ. ಮುಂದೆ ಹುಟ್ಟುವವರ ಮಾತು ಇರಲಿ ಹಾಲಿ ಬದುಕಿರುವವರ ಸಮತಲ-ಸರ್ವತೋಮುಖ ಬೆಳವಣಿಗಾಗಿ ಅಭಿವೃದ್ಧಿಯನ್ನು ಯೋಜಿಸಿಕೊಳ್ಳಬೇಕಾಗಿದೆ. ಅದು ಕಾರಣವಾಗಿಯೆ ಜೀವನ ಧರ್ಮದ ಧರ್ಮ, ಜ್ಞಾನ ಮತ್ತು ತಂತ್ರಜ್ಞಾನದ ಪುನರ್ ಸಂಯೋಜನೆ ಆಗಲೇಬೇಕಾಗಿದೆ. ಜನಪದ ಧರ್ಮ ಅಂಥ ಯೋಜನೆ ಗಳಲ್ಲಿ ಮೊದಲ ಆದ್ಯತೆಯಾಗಿದೆ.

ಇದುವರೆಗೆ ನಾನು ಧರ್ಮ-ದೇವರ ಬಗ್ಗೆಯೆ ಬರೆಯುತ್ತಾ ಬಂದೆ. ಅವು ಏನು ? ಎಲ್ಲಿಂದ ಬಂದವು ? ಎಂಬ ಬಗ್ಗೆ ಹೇಳಲಿಲ್ಲ. ಮೇಲುನೋಟಕ್ಕೆ ನಮಗೆ ತಿಳಿದಿರುವಂತೆ ಧರ್ಮ ಸಾಮಾನ್ಯವಾದುದಲ್ಲ, ಕೇವಲ ಲೌಕಿಕವಾದುದಲ್ಲ, ಅದೊಂದು ವಿಶೇಷ ಅತಿ ವಿಶೇಷ (Speical, Super Special). ಲೌಕಿಕ-ಅಲೌಕಿಕ ಎಂದೆಲ್ಲಾ ತಿಳಿದುಕೊಂಡಿದ್ದೇವೆ. ಅದು ಕೇವಲ ಲೌಕಿಕವಾಗಿದ್ದಿದ್ದರೆ ಹಳೆಯ ಬಟ್ಟೆಯಂತೆ ಗೆದ್ದಲು ಹಿಡಿದು ಹೋಗುತ್ತಿತ್ತು. ಯಾವುದೋ ಕಾಲದಲ್ಲಿ ಹುಟ್ಟಿದ್ದು ಈ ಹೊತ್ತಿಗೂ ಮನುಷ್ಯನನ್ನು ನಾನಾ ವಿಧಗಳಲ್ಲಿ ಕಾಡುತ್ತಿದೆ ಎಂದರೆ ಅದು ಅದರ

ಅನಂತ ಸತ್ಯದ ಪರಿಣಾಮ ಎಂದೇ ಹಲವರು ತಿಳಿದಿದ್ದಾರೆ. ಅದು ಈಗ 'ಸೂಪರ್ ಹ್ಯೂಮನ್ ಟೆಂಡೆನ್ಸಿ'. ಮನುಷ್ಯನ ಲೌಕಿಕ ಕೊರತೆಗಳ ಬೇಡಿಕೆಯ ಕಾರಣದಿಂದ ಹುಟ್ಟಿದ ಅದು ಸೂಪರ್ ಹ್ಯೂಮನ್ ಸ್ವಭಾವವೇ ಹೌದು. ಮನುಷ್ಯ ಲೌಕಿಕದಲ್ಲಿ ಸಾಮಾನ್ಯವಾಗಿ ಪಡೆಯಲಾಗದ್ದನ್ನು ಧರ್ಮದ ಒಳಗೆ ಪಡೆಯಲು ಪ್ರಯತ್ನಿಸುತ್ತಾನೆ. ಆ ಧರ್ಮದ ಶಕ್ತಿ ಮತ್ತು ಕೇಂದ್ರವಾಗಿ ದೇವರನ್ನು ಆಹ್ವಾನಿಸಿಕೊಂಡಿದ್ದಾನೆ. ನಿಯಂತ್ರಿಸಿ ಕೊಂಡಿದ್ದಾನೆ. ಆ ಕಾರಣಕ್ಕಾಗಿಯೆ ಮನುಷ್ಯ ಕೊಡಲಾರದ್ದನ್ನು ದೇವರು, ಧರ್ಮ ಕೊಡುತ್ತವೆ ಎಂದು ಮನುಷ್ಯ ನಂಬಿದ್ದಾನೆ.

ಮನುಷ್ಯನ ಈ ನಂಬಿಕೆ ಅಪರಾಧವಲ್ಲ. ಅದನ್ನು ನಿರ್ವಹಿಸಿದ ಜ್ಞಾನಿಗಳು ಮಾಡಿದ ತಪ್ಪು-ಸರಿಗಳಿಂದ ಈಗ ಧರ್ಮ ಕಷ್ಟವನ್ನು ಎದುರಿಸಬೇಕಾಗಿದೆ. ಮನುಷ್ಯ ವಸ್ತುಜೀವಿ ಮಾತ್ರವಲ್ಲ, ಅವನು ಭಾವಜೀವಿ ಕೂಡ ಹೌದು. ವಾಸ್ತವದ ವಸ್ತುಗಳನ್ನೇ ಭಾವನಾತ್ಮಕಗೊಳಿಸಿಕೊಂಡು ಬದುಕುವ ಅವನ ಜೀವನ ಸ್ಥಿತಿಯೆ ಒಂದು ವಿಶೇಷ. ಆದರೆ ಈ ಭಾವನೆಗಳನ್ನು ಶೋಷಿಸಿಕೊಂಡು ಬಂದ ಎಲ್ಲ ಸಮುದಾಯಗಳ ಪುರೋಹಿತ ವರ್ಗ ಮಾತ್ರ ಮಹಾ ಅಪರಾಧಿ ಎಂಬುದು ಈ ಹೊತ್ತಿನ ವೈಜ್ಞಾನಿಕ ಬೆಳಕಿನಿಂದ ಸ್ಪಷ್ಟವಾಗಿದೆ. ಧರ್ಮದಲ್ಲಿಯ ಇಂಥ ಪೌರೋಹಿತ ಅಂಶಗಳನ್ನು ಹೊರಹಾಕುತ್ತ ಧರ್ಮದ ವಾಸ್ತವತೆಯನ್ನು ಪರಿಭಾವಿಸುವುದು ಈ ಹೊತ್ತಿನ ಅವಶ್ಯಕತೆಯಾಗಿದೆ. ಪೌರೋಹಿತ್ಯ ಎಂಬುದು ಕೇವಲ ಒಂದು ವರ್ಗದ ಶೋಧ ಮತ್ತು ಮುಂದುವರಿಕೆಯಾಗಿಲ್ಲ. ಆಳುವ ವರ್ಗದ ಕ್ರೌರ್ಯ ಮತ್ತು ಅದನ್ನು ಪೋಷಿಸುವ ಮತಿಗೇಡಿ ಬುದ್ಧಿಜೀವಿಗಳ ಕೊಡುಗೆ ಅದು. ಇವುಗಳನ್ನು ಗೆಲ್ಲಲು ಯುದ್ಧ ಮತ್ತು ಬುದ್ಧಿ ಎರಡೂ ಬೇಕು. ಈ ಸಂಯುಕ್ತ ಶಕ್ತಿಗಳು ಒಂದು ಚಾರಿತ್ರಿಕ ಘಟ್ಟದ ಪರಿಣಾಮ ವಾಗಿದ್ದಲ್ಲಿ ಸುಲಭವಾಗಿ ಹಿಂದಕ್ಕೆ ತಳ್ಳಿ ಹೋಗಬಹುದಿತ್ತು. ಅವು ನಿರಂತರ ಹೊಸ ಹೊಸ ವೇಷದಲ್ಲಿ ಅವತರಿಸುವ ಅವತಾರ ಜನ್ಮಿಗಳು. ಈ ಹೊತ್ತಿನ ಆಧುನಿಕ ಸಂದರ್ಭಕ್ಕೆ ಅವು ನವ ಪುರೋಹಿತಶಾಹಿಗಳಾಗಿ

ಅವತರಿಸಿವೆ. ಅವು ಈಗ ಜಾತಿಯ ಸ್ವರೂಪದಲ್ಲಿ ಇಲ್ಲ. ಧರ್ಮವನ್ನೇ ಅವು ಉದ್ಯಮ ಮಾಡಿಕೊಂಡಿವೆ. ಇಂಥ ಧಾರ್ಮಿಕ ಉದ್ಯಮಗಳಿಂದ ಧರ್ಮವನ್ನು ಬಿಡುಗಡೆಗೊಳಿಸಬೇಕಾಗಿದೆ.

ಈ ಧರ್ಮದ ಬಿಡುಗಡೆ ಏನಿದ್ದರೂ ಸಾಂಸ್ಥಿಕ ಧರ್ಮಗಳಾದ ಹಿಂದೂ, ಮುಸಲ್ಮಾನ, ಕ್ರೈಸ್ತ ಧರ್ಮಗಳನ್ನು ಕುರಿತದ್ದು. ಮತಾಂತರದ ಮೂಲಕ ಇವು ಮಸಲತ್ತು ಮಾಡುತ್ತಿವೆ. ದೇಶ-ದೇಶಗಳ ಮಧ್ಯೆ ಯುದ್ಧ ವಾತಾವರಣವನ್ನು ಸೃಷ್ಟಿ ಮಾಡುತ್ತಿವೆ. ಬಡತನದಿಂದ ಬಿಡುಗಡೆ ಗೊಳ್ಳುವುದಕ್ಕಿಂತ ಮಿಗಿಲಾಗಿ ಇಂಥ ಕ್ರಿಮಿನಲ್ ಧರ್ಮಗಳಿಂದ ಬಿಡುಗಡೆಗೊಳ್ಳುವುದೇ ಮನುಷ್ಯನ ದೊಡ್ಡ ಸಮಸ್ಯೆಯಾಗಿದೆ. ಆದರೆ ಜನಪದ ಧರ್ಮಕ್ಕೆ ಇಂಥ ಯಾವ ಕಳಂಕವೂ ಇಲ್ಲ. ಜನಪದ ಧರ್ಮವೆಂಬುದು ಜೀವನ ಧರ್ಮ. ಇನ್ನೊಂದು ಅರ್ಥದಲ್ಲಿ ಅದು ಕುಟುಂಬ ಧರ್ಮ. ಮತ್ತೂ ಹೇಳುವುದಾದರೆ ಅದು ವಿಕೇಂದ್ರೀಕೃತ ಧರ್ಮ. ಅಲ್ಲಿ ಮನುಷ್ಯನ ದುರ್ಬಳಕೆ ಇಲ್ಲ. ಮನುಷ್ಯ ಅಲ್ಲಿ ಮನುಷ್ಯ ಮಾತ್ರದವನಾಗಿ ಇರಬಹುದು. ಅನ್ಯ ವಿಷಯಗಳು ಅಲ್ಲಿ ಅಪ್ರಸ್ತುತ. ನಿನ್ನ ಸಾಮರ್ಥ್ಯ, ನಿನ್ನ ನೈಪುಣ್ಯ, ನಿನ್ನ ಕ್ರಿಯಾಶೀಲತೆ ನಿನ್ನ ಕೈಯಲ್ಲಿದ್ದರೆ ಸಾಕು. ಅದರಂತೆ ಫಲ ಅನುಭವಿಸುವೆ. ಸೋಂಬೇರಿಯಾದರೆ ಸಾಯುವೆ. ಅಲ್ಲಿ ಕದೀಮತನ ಮಾಡಿ ಬದುಕುವ ಮಾರ್ಗ ಇಲ್ಲ. ದುಡಿದು ತಿನ್ನು ಆಗದಿದ್ದಲ್ಲಿ ನಿನ್ನ ಗತಿ ನೀನು ನೋಡಿಕೋ ! 'ಮೈಗಳ್ಳ ಮಣ್ಣು ತಿನ್ನುತ್ತಾನೆ' ಎನ್ನುತ್ತದೆ ಜನಪದ ತತ್ವಸಿದ್ಧಾಂತ.

7. ಧರ್ಮ : ಜನಪದ

ಅಂಥ ಜನಪದ ಧರ್ಮದ ಕಡೆಗೆ ಹೋಗೋಣ. ಜನಪದ ಅಂದರೆ ಇದು : ಒಂದು ಸಮಾನ ಚಿಂತನೆಯ ಮೇಲಿಂದ ಒಂದುಗೂಡಿದ ಒಂದು ಸಮುದಾಯ. ಈ ಸಮಾನ ಚಿಂತನೆ ಒಂದು ನಿರ್ದಿಷ್ಟ ಸಿದ್ಧಾಂತವಾಗಿರಬಹುದು. ಇಲ್ಲವೆ ಸಮಾನವಾಗಿ ಒಪ್ಪಿಕೊಂಡ ಒಂದು ಮನಸ್ಥಿತಿಯೂ ಆಗಿರಬಹುದು. ಬುಡಕಟ್ಟು ಒಂದು ಜನಪದ. ದವಸ

ಧಾನ್ಯ ಒಕ್ಕುವ ಒಕ್ಕಲಿಗ ಒಂದು ಜನಪದ. ಕುರಿ ಸಾಕಿ ಬದುಕುವ ಕುರುಬ ಜನ ಒಂದು ಜನಪದ. ಮಡಕೆ ಮಾಡಿ ಬದುಕುವ ಕುಂಬಾರ ಒಂದು ಜನಪದ. ಹೀಗೆ ಒಂದೊಂದು ವೃತ್ತಿ ಮಾಡಿ ಬದುಕುವವರು ಒಂದು ಜನಪದ. ಈ ಹೊತ್ತಿನ ಪರಿಸ್ಥಿತಿಯಲ್ಲಿ ಗಾರೆ ಕೆಲಸದವರು ಒಂದು ಜನಪದ. ಕೃಷಿ ಕಾರ್ಮಿಕರು, ಗಾರ್ಮೆಂಟ್ ಕಾರ್ಮಿಕರು, ಅಡುಗೆ ಕೆಲಸದವರು, ದಲ್ಲಾಳಿಗಳು, ಮೂಟೆ ಹೊರುವವರು, ಕಸ ತೆಗೆಯುವವರು ಒಂದೊಂದು ಜನಪದ ಎನ್ನಿಸಿಕೊಳ್ಳುತ್ತಾರೆ. ಒಂದೇ ಮನಸ್ಥಿತಿ ಇರುವ ಜನಪದಗಳೆಂದರೆ ಎಲ್ಲ ಜಾತಿ, ವರ್ಗದ ಬಡವರು. ಸೀಮೆಎಣ್ಣೆ ಬೆಲೆ ಏರಿದಾಗ, ದವಸ ಧಾನ್ಯದ ಬೆಲೆ ಹೆಚ್ಚಿದಾಗ, ಗ್ಯಾಸ್ ಸಿಲಿಂಡರ್ ಬೆಲೆ ದುಬಾರಿಯಾದಾಗ ತಮ್ಮ ಕಷ್ಟ ಹೇಳಿಕೊಂಡು ಬೀದಿಗಿಳಿಯುವ ಈ ಜನ ಒಂದು ಜನಪದ ಎನಿಸಿಕೊಳ್ಳುತ್ತಾರೆ. ಜನಪದದ ಇನ್ನೂ ಒಂದು ಮುಖ್ಯ ಗುಣವೆಂದರೆ ಯಾರಿಗೂ ಮೋಸ ಮಾಡದೆ, ಶೋಷಣೆ ಮಾಡದೆ ತಮ್ಮ ಶ್ರಮ ಮತ್ತು ಸಾಮರ್ಥ್ಯದಿಂದ ಬದುಕುವ ಸಾಮಾನ್ಯ ಜನ. ಸಾಮಾನ್ಯನಿಗಿರುವ ಸಮತಾಗುಣ, ಸಹಕಾರ ಮನೋಭಾವ, ಸಹಿಷ್ಣುತೆ, ದಯೆ, ಕರುಣೆಯುಳ್ಳ ಮಾನವ ಗುಣಗಳನ್ನು ಉಳ್ಳ ಯಾರೂ ಜನಪದರು ಎನಿಸಿಕೊಳ್ಳಬಹುದು. ಮಾನವನ ಸಮಾನತೆಗಾಗಿ ಹೋರಾಡುವ ಹೋರಾಟಗಾರರು, ಪ್ರಗತಿಪರ ಚಿಂತಕರು, ಇದೇ ಮನೋಧರ್ಮದ ಜ್ಞಾನಿ–ವಿಜ್ಞಾನಿಗಳು ಜನಪದರ ಗುಂಪಿಗೆ ಬರುತ್ತಾರೆ. ಸಾಮಾನ್ಯತೆ ಮತ್ತು ಸಮಾನತಾ ಮನೋಧರ್ಮ ಎಲ್ಲಿರುತ್ತದೋ ಅಲ್ಲಿ ಜನಪದವಿರುತ್ತದೆ.

ಇಂಥ ಜನಪದರ ಧರ್ಮವೇ ಜನಪದ ಧರ್ಮ. ಇಲ್ಲಿ ಧರ್ಮವೆಂದರೆ ಏನೇನೊ ನಂಬಿಕೆ–ಆಚರಣೆಗಳ ಮೂಟೆ ಎಂದು ತಿಳಿಯಬೇಕಿಲ್ಲ. ಧರ್ಮ ಎಂದರೆ ಸರಳಾರ್ಥದಲ್ಲಿ ನಡವಳಿಕೆ; ಹೀಗೆ–ಹೀಗೆ ನಡೆದುಕೊಳ್ಳಬೇಕು ಎಂದು. ಮಕ್ಕಳು ದೇವರ ಸಮಾನ, ಅವುಗಳ ಮಧ್ಯೆ ಮತ್ಸರ ಬಿತ್ತಬೇಡ. ಹಿರಿಯರು ಎಂಬುವರು ಸಾಧಕರು. ಜ್ಞಾನ ಭಂಡಾರ ಇದ್ದಂತೆ. ಅವರನ್ನು ಗೌರವಿಸು. ಅವರಿಂದ ಆಶೀರ್ವಾದ

ಪಡೆ ಎಂದರೆ ಅವರ ಜ್ಞಾನವನ್ನು ನೀನು ಸಂಪಾದಿಸು ಎಂದು ಅರ್ಥ. ಸ್ತ್ರೀಯರನ್ನು ಗೋವುಗಳನ್ನು ಕೊಲ್ಲಬೇಡ. ಯಾಕೆಂದರೆ ಅವರು ಫಲವನ್ನು ಕೊಟ್ಟು ಸಮಾಜವನ್ನು ಬೆಳೆಸುವವರು. ಕುರುಡ ಕುಂಟ ಹೆಳವರಲ್ಲಿ ಮರುಕದಿಂದ ಭೋನವಿಕ್ಕು ಎಂದರೆ ಅವರು ದುಡಿಯಲಾರದವರು, ಅವರನ್ನು ನೋಡಿಕೋ ಎಂದು ಸೂಚನೆ.

ಕೆಲಸ ಮಾಡಿ ಉಣ್ಣು, ಕರೆದರೆ ಉಣ್ಣು, ಕದಿಬೇಡ. ಬಡವರ ಬಗ್ಗೆ ಕರುಣೆ ತೋರಿಸು ಬಡೀಬೇಡ. ದೀನ ದಲಿತರನ್ನು ಮಮತೆಯಿಂದ ನೋಡು, ಅವರು ಅದರಿಂದ ವಂಚಿತರಾಗಿದ್ದಾರೆ. ದುಬರ್ಲನಿಗೆ ನೆರವಾಗು. ಪ್ರಕೃತಿ ನಿನಗೆ ಕೊಟ್ಟಿರುವ ಶಕ್ತಿಯನ್ನು ಅವನಿಗೆ ಕೊಟ್ಟಿಲ್ಲ. ಇನ್ನೊಬ್ಬನನ್ನು ನಿನ್ನಂತೆಯೆ ಕಾಣು. ಹೀಗೆ–ಇವುಗಳನ್ನೇ ಸೇರಿಸಿ ಇತ್ತೀಚೆಗೆ ಪ್ರಜಾಪ್ರಭುತ್ವ ಸಮಾನತೆ, ಸಹಬಾಳ್ವೆ, ಸೋದರತ್ವದಿಂದಿರಿ ಎಂದು ಹೇಳುತ್ತದೆ. ಮೊದಲು ನಿನ್ನೆದುರು ಮನುಷ್ಯನನ್ನು ಕಾಣು, ಆಮೇಲೆ ದೂರದಲ್ಲಿರುವು ದನ್ನು ಹುಡುಕು. ಬಸವಣ್ಣನವರು ಹೇಳಿದ ಕಾಯಕ, ದಾಸೋಹ ಮತ್ತು ಶರಣ ತತ್ವಗಳು ಜನರನ್ನು ಕೂಗಿ ಕರೆಯುವ, ಕೂಡಿಸುವ, ಬದುಕಿಸುವ ತತ್ವಗಳು. ಇವೇ ಜನಪದ ಧರ್ಮದ ನಡವಳಿಕೆಗಳು. ನಾನು ಚಿಕ್ಕವನಿದ್ದಾಗ ನನ್ನ ತಾಯಿ ನನಗೆ ಹೇಳಿಕೊಟ್ಟದ್ದು:

1) ಹಸಿದು ಬಂದವರ ಜೊತೆ ಅನ್ನ ಹಂಚಿಕೊ.
2) ದಾವಾರಿ ಬಂದವರಿಗೆ ನೀರು ಕೊಡು.
3) ದಾರಿಯಲ್ಲಿ ಮುಳ್ಳುಕಲ್ಲು ಇದ್ದರೆ ತೆಗೆದು ಹಾಕು.
4) ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡು.
5) ಸತ್ಯವಂತನಾಗಿ ಬಾಳು.

ಈ ಹೊತ್ತಿಗೂ ಇವು ನನ್ನ ಧರ್ಮಸೂತ್ರಗಳು. ಬುದ್ಧ ಹೇಳಿದ್ದು ಕೂಡ ಧರ್ಮದ ಮೂಲ ಮತ್ತು ಕೇಂದ್ರ ಸತ್ಯ, ದೇವರು ಎಂಬ ವ್ಯಕ್ತಿ ಅಲ್ಲ. ವಚನಕಾರರ ದೇವರು ಕಾಯಕ. ಆ ಮೊದಲು ಧರ್ಮ ಕಾಯಕ ಮಾಡದೆ, ಸುಳ್ಳು, ತಟವಟ ಮತ್ತು ಮೋಸ ಮಾಡಿ ಹೊಟ್ಟೆ

ಹೊರೆಯುವವರ ತಂತ್ರ–ಕುತಂತ್ರವಾಗಿತ್ತು. ಬಸವಣ್ಣನವರು ಅದನ್ನು ನಿರಾಕರಿಸಿದರು. ಅದಕ್ಕೆ ವಿರುದ್ಧವಾಗಿ ಕಾಯಕ ಮಾಡಿ ಬದುಕು ಎಂದರು. ದುಡಿಮೆಯಲ್ಲಿ ಕಾಯಕವೇ ನಿತ್ಯ–ನಿರಂತರ. ಸುಳ್ಳು, ಕಟ್ಟುಕತೆ, ಪುರಾಣ ಧರ್ಮ ಅಲ್ಲ. ಅದಕ್ಕೆ ನಮ್ಮ ಸಾಮಾನ್ಯ ಜನ 'ಪುರಾಣ ಹೇಳೋಕೆ, ಬದನೆಕಾಯಿ ತಿನ್ನೋಕೆ' ಅನ್ನುತ್ತಾರೆ. ಬದನೆಕಾಯಿ ವಾಸ್ತವ, ಪುರಾಣ ಸುಳ್ಳು–ಕೆಲ ವಾಸ್ತವದ ಕತೆ. ಆದರೆ ಎಲ್ಲ ಪುರಾಣಗಳೂ ಅಲ್ಲ. ರಾಮಾಯಣ, ಮಹಾಭಾರತ ಮೂಲದಲ್ಲಿ ಜನಪದ ಪುರಾಣಗಳು. ತಮ್ಮ ನೈತಿಕತೆಯನ್ನು ಉಳಿಸಿಕೊಳ್ಳಲು ಅವುಗಳನ್ನು ಉಳಿಸಿಕೊಂಡು ಬಂದರು. ಇತರ ಶಾಸ್ತ್ರ ಪುರಾಣಗಳು ಹೊಟ್ಟೆ ಪಾಡಿಗೆ ಹೊಸೆದ ಕಥೆಗಳಷ್ಟೆ.

ಕೆಲವರು ಸಂಸ್ಕೃತಿ, ಧರ್ಮ ಎಂದು ಬಳಸುತ್ತಾರೆ. ಈ ಬಗ್ಗೆ ತಿಳಿದುಕೊಳ್ಳುವುದು ಒಳಿತು. ಸಂಸ್ಕೃತಿ ಎಂದರೂ ನಡವಳಿಕೆಗಳ ಮೊತ್ತ ಎಂದಾಗುತ್ತದೆ. ಧರ್ಮವೂ ನಡವಳಿಕೆಗಳ ಸಮೂಹ ಎಂದರೆ ಗೊಂದಲವಾಗಬಹುದು. ವ್ಯತ್ಯಾಸ ಇಷ್ಟೆ. ಧರ್ಮ ನಿರ್ಬಂಧಿಸಿದ ನಡವಳಿಕೆಗಳ ಮೊತ್ತ. ಸಂಸ್ಕೃತಿಗೆ ನಿರ್ಬಂಧವಿಲ್ಲ. ಅದು ನಾಗರೀಕತೆಯಾಗಿ ಬೆಳೆಯುತ್ತದೆ. ಮುಂದೊಂದು ದಿನ ನವನಾಗರೀಕತೆಯಾಗಿಯೂ ಬೆಳೆಯುತ್ತದೆ. ಧರ್ಮದ ನಡವಳಿಕೆಗಳು ನಿರ್ದಿಷ್ಟ ಮೌಲ್ಯವನ್ನು ಹೊಂದಿ ಕಾನೂನು–ಕಟ್ಟಳೆಗಳಾಗಿ ಮಾರ್ಪಡುತ್ತವೆ. ಮಾನವ ಬದುಕಿನ ಅಮೂಲ್ಯ ಮೌಲ್ಯಗಳೆಲ್ಲ ಜನಪದ ಧರ್ಮದ ಮೂಲತತ್ವಗಳಾಗಿ ರೂಪು ಪಡೆಯುತ್ತವೆ. ಸಂಸ್ಕೃತಿಯಲ್ಲಿ ಸುಸಂಸ್ಕೃತಿ, ಕುಸಂಸ್ಕೃತಿ, ದುಷ್ಟ ಸಂಸ್ಕೃತಿ, ತಲೆಹೊಡೆದು ತಿನ್ನುವವರ ಸಂಸ್ಕೃತಿ ಎಂಬ ಅನೇಕ ಬಗೆಯ ಸಂಸ್ಕೃತಿಗಳಿರುತ್ತವೆ. ಧರ್ಮ ಯಾಹೊತ್ತೂ ಎಲ್ಲರಿಗೂ ಒಂದೆ. ಧರ್ಮ ಒಂದೇ ಒಂದು. ಅದಕ್ಕೆ ವಿರುದ್ಧವಾದುದೆ ಕರ್ಮ.

ಬ್ರಹ್ಮ ಮಾಡಿದ್ದು ಬ್ರಾಹ್ಮಣ ಧರ್ಮ, ಬುದ್ಧ ಮಾಡಿದ್ದು ಬೌದ್ಧ ಧರ್ಮ. ಕ್ರಿಸ್ತ ಮಾಡಿದ್ದು ಕ್ರೈಸ್ತ ಧರ್ಮ. ಮಹಮದ್ ಪೈಗಂಬರ್ ಮಾಡಿದ್ದು ಮುಸ್ಲಿಂ ಧರ್ಮ. ಹೀಗೆ ಪಂಥ, ಪಂಗಡಗಳು ತಮ್ಮದೇ

ಆದ ಧರ್ಮವನ್ನು ಸೃಷ್ಟಿಸಿಕೊಂಡದ್ದುಂಟು. ಇವೆಲ್ಲ ತುಂಡು ಧರ್ಮಗಳು. ಜನರನ್ನು ತಮ್ಮ ತಮ್ಮಲ್ಲಿ ಹಂಚಿಕೊಂಡವು. ತಮ್ಮದೇ ತತ್ವದ ಗೂಡಿನೊಳಗೆ ಅವರನ್ನು ಬೆಳೆಸಿದವು. ಕೊನೆಗೆ ಮೋಕ್ಷವೆಂಬ ನೆಮ್ಮದಿಯ ತಾಣವನ್ನೂ ಸೂಚಿಸಿದವು. ಅಂಥ ತತ್ವಗಳಲ್ಲಿ ನಿಜವೂ ಉಂಟು ಸುಳ್ಳುಗಳೂ ಉಂಟು. ಜನಪದ ಧರ್ಮ ತುಂಡು ಧರ್ಮ ಅಲ್ಲ. ಸುಳ್ಳು ಹೇಳುವ ಧರ್ಮ ಅಲ್ಲ. ಮೋಸ ಮಾಡುವ ಧರ್ಮ ಅಲ್ಲ. ಅದು ಬಯಲು ಧರ್ಮ. ಅದು ಜನರ ಧರ್ಮ, ಜನರಿಂದಾಗಿ, ಜನರಿಂದ ಹುಟ್ಟಿ ಬೆಳೆದ ಧರ್ಮ. ಅದರ ಕಾರ್ಯಶೀಲತೆಯು ಅದರದೇ ನಂಬಿಕೆ, ನಡವಳಿಕೆ, ಕಥೆ, ಆಚರಣೆ ಮತ್ತು ಪುರಾಣಗಳಲ್ಲಿ ವ್ಯಕ್ತವಾಗಿದೆ. ಅದನ್ನು ಪರಿಶೀಲಿಸೋಣ.

8. ಜನಪದ ಪುರಾಣ : ಜನಪದ ಧರ್ಮ

ಒಂದು ಜನಪದ ಪುರಾಣವನ್ನು ನೋಡಿ : ಶಿವನ ವಾಹನ ಬಸವ. ಅವನು ಕೈಲಾಸದಲ್ಲಿದ್ದ. ಶಿವ ದುಡಿಮೆಯ ದೇವರು. 'ಇರುವೆಂಬತ್ತು ಕೋಟಿ ಜೀವಿಗಳಿಗೆ ಅನ್ನ ಪಡಿ ಕೊಡುವನು. ರಾತ್ರಿ ಹೊತ್ತು ಭೂಮಿಯ ಮೇಲೆ ಸಂಚರಿಸುತ್ತಾ ಭೂತ-ಪ್ರೇತಾದಿ ಸಕಲ ಮಾನವ ಜೀವಿಗಳ ಕಷ್ಟ ಸುಖಗಳನ್ನು ವಿಚಾರಿಸುವನು. ಅವನು ಒಮ್ಮೆ ಬಸವನಿಗೆ ಹೇಳಿದ : ನೀನು ಭೂಮಿಗೆ ಹೋಗಿ ಮುದುಕರಿಗೆ ಒಂದು ಊಟ, ಮಧ್ಯ ವಯಸ್ಕರಿಗೆ ಎರಡು ಊಟ, ಮಕ್ಕಳಿಗೆ ಮೂರು ಊಟ ಅಂತ ಸಾರಿ ಬಾ ಅಂದ. ಬಸವ ಭೂಲೋಕಕ್ಕೆ ಬಂದ. ಗ್ಯಾನ ಯಾವ ಕಡೆಗೆ ಹೋಯಿತೊ ಏನೊ 'ಮದುಕರಿಗೆ ಎರಡು ಊಟ, ಮಧ್ಯ ವಯಸ್ಕರಿಗೆ ಮೂರು ಊಟ, ಮಕ್ಕಳಿಗೆ ನಾನಾ ಊಟ ಎಂದು ಸಾರಿ ಬಂದ. ಶಿವನ ಆದೇಶ ಬಸವನಿಗೆ ಜ್ಞಾಪಕಕ್ಕೆ ಬಂದದ್ದು ಕೈಲಾಸಕ್ಕೆ ಬಂದ ಮೇಲೆಯೆ. ಶಿವ ವಿಚಾರಿಸಲಾಗಿ ಬಸವ ಸಾರಿ ಬಂದ ಬಗ್ಗೆ ತಿಳಿಯಿತು. ನೀನು ತಪ್ಪು ಮಾಡಿದ್ದೀಯ. ಬರೀ ತಿನ್ನುವುದಕ್ಕೆ ಆದ್ಯತೆ ಕೊಟ್ಟಿದ್ದೀಯ. ಕಾಯಕದ ನೆಲೆ-ಬೆಲೆಯನ್ನು ಗಮನಿಸಿಲ್ಲ. ಆದ್ದರಿಂದ ಪ್ರಾಯಶ್ಚಿತ್ತ ಕಾರಣವಾಗಿ ಭೂಲೋಕಕ್ಕೆ ಹೋಗು. ಅಲ್ಲಿ ಜನರ ಬೇಸಾಯಕ್ಕೆ

ಹೆಗಲು ಕೊಡು. ನಿನ್ನ ಕರ್ಮವನ್ನು ಕಳೆದುಕೊಂಡು ಬಾ ಎಂದು ಆಜ್ಞಾಪಿಸಿದ.

ಶಿವ ಬಸವನಿಗೆ ಧರ್ಮದ ಮಾತು ಹೇಳಿದ್ದ. ದುಡಿಮೆಗೆ ತಕ್ಕುದಾಗಿ ತಿನ್ನಬೇಕು. ತಿಂದು ತಿಂದು ಹೊಟ್ಟೆ ಬೆಳೆಸಿಕೊಳ್ಳಬಾರದು. ಚೆನ್ನಾಗಿ ದುಡಿಯುವವನಿಗೆ ಹೊಟ್ಟೆ ಬರುವುದಿಲ್ಲ. ಕೂತು ಕೂಳು ಕತ್ತರಿಸುವವನಿಗೆ ಮಾತ್ರ ಹೊಟ್ಟೆ ಬರುತ್ತದೆ. ಮುದುಕರಿಗೆ ಒಂದು ಒಳ್ಳೆಯ ಊಟ ಸಾಕು. ಅವನ ಜೀರ್ಣಶಕ್ತಿಗೆ ಅಷ್ಟು ಶಕ್ಯ. ದುಡಿಯುವವನಿಗೆ ಎರಡು ಊಟ ಸಾಕು. ಸದಾ ಹೊಟ್ಟೆ ಭಾರವಿದ್ದರೆ ಕಾಯಕ ಮಾಡಲು ಆಗುವುದಿಲ್ಲ. ಮಕ್ಕಳಿಗೆ ಮೂರು ಊಟ ಸಾಕಿತ್ತು. ಬಸವ ಬೇರೆ ರೀತಿ ಹೇಳಿದ್ದ. ಅದಕ್ಕಾಗಿ ಅವನು ಮನುಷ್ಯರ ಜೊತೆಗೆ ಕೂಡಬೇಕಾಯಿತು. ನೇಗಿಲು–ನೊಗ ಹೊತ್ತು, ಗಾಡಿ ಎಳೆದು ದುಡಿಯಬೇಕಾಯಿತು. ಇನ್ನೂ ಅವನಿಗೆ ಆ ಹೊರೆಯಿಂದ ಬಿಡುಗಡೆ ಆಗಿಲ್ಲ. ಆಗುವ ಗ್ಯಾರಂಟಿ ಇಲ್ಲ !

ಬಹುಶಃ ನಮ್ಮ ದೇಶದ ಹೊಟ್ಟೆ ಧರ್ಮಗಳನ್ನು ನೋಡಿಯೆ ಈ ಪುರಾಣ ಹುಟ್ಟಿರಬೇಕು. ದುಡಿಮೆ ಧರ್ಮ. ಬೇರೆ ರೀತಿಯ ಸಂಪಾದನೆ, ಅನುಭೋಗ ಅಧರ್ಮ ಎಂಬುದನ್ನು ಈ ಪುರಾಣ ಸರಳವಾಗಿ, ಮಾರ್ಮಿಕವಾಗಿ ಹೇಳುತ್ತದೆ. ದುಡಿಮೆಯೊಂದು ನಿತ್ಯ, ಸತ್ಯ, ಪ್ರಾಮಾಣಿಕ ಜೀವನ ಮೌಲ್ಯ ಎಂಬುದಲ್ಲವೇ ಇದರ ಸಂದೇಶ ! ಹೀಗೆ ಧರ್ಮ ಸಂದೇಶ ವಾಹಕ.

9. ಜನಪದ ಕಥೆ : ಧರ್ಮ

ಒಂದು ಜನಪದ ಕಥೆ : ಅಪ್ಪ ಮಗ ಇಬ್ಬರೆ. ಕೂಲಿ ಮಾಡಿ ಬದುಕುವ ಜನ. ಅಪ್ಪನಿಗೂ ಸಾಯುವ ಕಾಲ ಸಮೀಪಿಸಿತು. ಅಪ್ಪ ಮಗನನ್ನು ಕರೆದು ಹೇಳಿದ 'ಮಗ ನಾನು ಇನ್ನು ಇರುವವನಲ್ಲ. ನಿನಗೆ ಕೊಡಲು ನನ್ನಲ್ಲಿ ಏನೂ ಇಲ್ಲ. ಆ ಹೊತ್ತಿನ ಕೂಲಿ ಆ ಹೊತ್ತಿನ ಊಟ ನಮ್ಮ ಬಾಳು. 'ನಿನಗೆ ಒಂದು ಮಾತು ಹೇಳುತ್ತೇನೆ ಕೇಳು. ಅದರಂತೆ ಬದುಕು. ಧರ್ಮ ನಿನ್ನ ತಲೆ ಕಾಯುತ್ತದೆ ಅಂದು : 'ಮಗನೆ

ಕರೆದ್ಧತ್ರ ಉಣ್ಣು, ತೆರದ್ಧತ್ರ ಮಲಗು, ಧರ್ಮವೇ ಜಯ ಅಂತ ತಿರುಗು' ಎಂದು ಹೇಳಿದ, ಪ್ರಾಣಬಿಟ್ಟ.

ಈ ಹುಡುಗ ಅಪ್ಪ ಹೇಳಿದ ಮಾತನ್ನು ಉರು ಹೊಡಕೊಂಡ. ಹೋದಲ್ಲೆಲ್ಲ ಅದೇ ಮಾತು. ಆ ಮಾತು ಕೇಳಿ ನಕ್ಕ ಜನ ಅವನಿಗೆ 'ಧರ್ಮ್ವೇ ಜಯ' ಅಂತ ಹೆಸರಿಟ್ಟರು. ಅವನು ಅಲ್ಲಿ ಇಲ್ಲಿ ಅಲೆದು ಒಬ್ಬ ಯಜಮಾನನ ಮನೆಗೆ ವರ್ಷಗೂಲಿಗೆ ಉಳಿದ. ಹೀಗಿರುವಾಗ ಒಂದು ದಿನ ಯಜಮಾನ ಕೆಲಸದವಳ ಜೊತೆಗೆ ಬೆತ್ತಲೆ ಮಲಗಿದ್ದ. ಈ ಧರ್ಮ್ವೇಜಯ ಹೇಗೋ ನೋಡಿದ. ಪಾಪ, ಚಳಿ ಬೆತ್ತಲೆ ಮಲಗಿದ್ದಾರೆ ಅಂತ ತನ್ನ ವಲ್ಲಿಯನ್ನೇ ಅವರ ಮೇಲೆ ಮುಚ್ಚಿ ಮುಂದೆ ನಡೆದ.

ಯಜಮಾನನಿಗೆ ಸಿಟ್ಟು ಬಂತು. ಎಲಾ ಮಗನೆ, ಯಜಮಾನ ಮಲಗಿರುವುದರ ಉಸಾಬರಿ ಇವನಿಗೆ ಯಾಕೆ. ಅದನ್ನೆಲ್ಲ ಈ ಆಳು ಕಂಡರೂ ಕಾಣದಂತೆ ಇರಬೇಕು. ಅದು ಬಿಟ್ಟು ಧೈರ್ಯ ಮಾಡಿ ಅದೂ ಕೊಳಕು ವಲ್ಲಿಯನ್ನು ನನ್ನ ಬೆನ್ನ ಮೇಲೆ ಎಸೆದು ಹೋಗಿದ್ದಾನೆ. ಇವನಿಗೆಷ್ಟು ಧಿಮಾಕು ಇರಬೇಕು. ಇವನನ್ನು ಹೀಗೆ ಬಿಟ್ಟರೆ ನನ್ನ ಮಾನ ಉಳಿಯುವುದಿಲ್ಲ ಎಂದವನೆ, ತನ್ನ ಕೆಲಸ ಮುಗಿದ ಮೇಲೆ ಅವನನ್ನು ಕರೆಸಿದ. ಬಾಳೆ ತೋಟಕ್ಕೆ ಹೋಗಿ ಬಾಳೆ ಗಾಳಿಗೆ ಬಿದ್ದವೆಯೋ ಯಂಗೋ ನೋಡಿಕೊಂಡು ಬಾ ಎಂದ. ಅತ್ತಲಿಂದ ಇಬ್ಬರು ಗುಂಡಿ ಕೆಲಸದವರನ್ನು ಕರೆದ. ಈ ಧರ್ಮ್ವೇಜಯ ಬಾಳೆ ತೋಟಕ್ಕೆ ಬರುತ್ತಾನೆ. ಅಲ್ಲಿ ನೀವು ಗುಂಡಿ ತೆಗೆದು ಅವನನ್ನು ಹೂತು ಬನ್ನಿ. ಬಾಕಿದೆಲ್ಲ ನಾನು ನೋಡಿಕೊಳ್ಳುತ್ತೇನೆ ಅಂದ.

ಈ ಧರ್ಮ್ವೇಜಯ ಬಾಳೆ ತೋಟಕ್ಕೆ ಹೋಗುತ್ತಿದ್ದಾನೆ. ದಾರಿಯಲ್ಲಿ ಒಂದು ಮನೆಯಲ್ಲಿ ಪಾರಾಯಣ ನಡೀತಾ ಇದೆ. ಮನೆಯವರು ಇವನನ್ನು ನೋಡಿದರು. ಪಾಪ, ತಬ್ಬಲಿ ಹುಡುಗ. ಹೊಟ್ಟೆಗೆ ಸರಿಯಾಗಿ ತಿಂದಿದೆಯೊ ಇಲ್ಲವೊ. ಈ ಹೊತ್ತು ಪಾರಾಯಣದ ದಿನ. ಹೊಟ್ಟೆ ತುಂಬ ಉಂಡು ಹೋಗಲಿ. ಬಾರ್ಲ ಧರ್ಮ್ವೇಜಯ ಉಂಡು ಹೋಗು ಎಂದರು. ದೊಡ್ಡವರು

ಪ್ರೀತಿಯಿಂದ ಕರೆದಿದ್ದಾರೆ. ಅಪ್ಪನ ಮಾತೂ ಸೈ ಇದೆ ಅಂತ ಊಟಕ್ಕಾಗಿ ಅಲ್ಲೆ ಕೂತ.

ಬಾಳೆ ತೋಟದಲ್ಲಿ ಗುಂಡಿ ತೆಗೆದವರು ಕಾದು ಸೋತರು. ಯಜಮಾನ ಹೂತ ಸುದ್ದಿ ಇನ್ನೂ ಬರಲಿಲ್ಲ ಎಂದು ಗಡಿಬಿಡಿಗೊಂಡ. ಏನು ನಡೆದಿದೆ ತಿಳಿದು ಬರಲು ತನ್ನ ಮಗನನ್ನೇ ಕಳಿಸಿದ. ಮಗ ತೋಟಕ್ಕೆ ಬಂದ. ಗುಂಡಿ ತೆಗೆಯುವವರು ಆ ಧರ್ಮ್ಮೇಜಯ ಅಂದ್ರೆ ಇವನೆ ಇರಬೇಕು ಎಂದು ಹಿಡಿದು ಗುಂಡಿಯಲ್ಲಿ ಹೂತು ಹಾಕಿದರು. ಅವರ ಬಾಳ್ವೆಗೆ ಹೋದರು.

ಇತ್ತ ಧರ್ಮ್ಮೇಜಯನ ಊಟ ಮುಗಿಯಿತು. ಹೊಟ್ಟೆ ಸವರಿಕೊಂಡು ತೋಟಕ್ಕೆ ಹೋದ. ಅಲ್ಲಿ ಯಾರೂ ಕಾಣಲಿಲ್ಲ. ಯಾವ ಬಾಳೆ ಗಿಡವೂ ಮುರಿದಿರಲಿಲ್ಲ. ನೆಟ್ಟಗೆ ಯಜಮಾನನ ಹತ್ತಿರ ಬಂದ. ತೋಟದಲ್ಲಿ ಏನೂ ಆಗಿಲ್ಲ ಬುದ್ಧಿ ಎಂದ. ಯಜಮಾನನಿಗೆ ಗಾಬರಿ. ತೋಟಕ್ಕೆ ಓಡಿದ. ನಿಜ ಸಂಗತಿ ತಿಳಿಯಿತು. ಅಯ್ಯೋ ದೇವರೆ ಎಂದು ತಲೆ ಮೇಲೆ ಕೈಹೊತ್ತು ಕೂತ.

ಧರ್ಮದ ಜಯ ಅಂದರೆ ಇದೆ. ಯುದ್ಧ ಅಲ್ಲ, ಪೂಜೆ ಅಲ್ಲ ; ಪಾರಾಯಣವೂ ಅಲ್ಲ. ಮನುಷ್ಯ ಬದುಕಬೇಕು. ದುಡಿಯುವ ಮನುಷ್ಯ ಉಳಿಯಬೇಕು. ರಕ್ಷಿತ ಅಲ್ಲದವನು ರಕ್ಷಿಸಲ್ಪಡಬೇಕು. 'ಅನಾಥನಿಗೆ ಆಕಾಶವೇ ಕಾವಲು' ಎಂಬಂತೆ, ಅಸಹಾಯಕರಿಗೆ ಧರ್ಮ ಕಾವಲಾಗಬೇಕು, ಕಳ್ಳ, ಸುಳ್ಳ ಕದೀಮರಿಗೆ ಅಲ್ಲ. ಧರ್ಮ ಉಳಿಯಿತು ; ಜೀವ–ಜೀವನ ಉಳಿಯಿತು !

10. ಧರ್ಮ : ಕಾವ್ಯ

ಒಂದು ತ್ರಿಪದಿ ಅನ್ನುತ್ತದೆ.

ಕರುಣ ಬಂದರೆ ಕಾಯೊ ಮರಣ ಬಂದರೆ ಹೊಯ್ಯೊ
ಕರುಣಿ ಕಲ್ಯಾಣ ಬಸವಣ । ಕಾಶಿಲಿಂಗ
ಕಡೆತನಕ ಕಾಯೊ ಅಭಿಮಾನ ॥

ಧರ್ಮ, ಅರ್ಥ, ಕಾಮ, ಮೋಕ್ಷಕ್ಕೆ ಅಂಗಲಾಚುವ ಜನರಿಗೆ ಈ ಹೆಣ್ಣಿನ ಧೈರ್ಯ ಎಲ್ಲಿದೆ ! ಅವರಿಗೆ ಧರ್ಮ ಬೇಕು (ಮೊತ್ತ / ಬಂಡವಾಳ) ಅರ್ಥ ಬೇಕು (ಭಂಡಾರ) ಕಾಮ ಬೇಕು (ಮೋಹ, ಮದ) ಕೊನೆಗೆ ಸತ್ತ ಮೇಲೂ ಇವರು ಐಶಾರಾಮವಾಗಿರಬೇಕು. ಅದಕ್ಕಾಗಿ ಮೋಕ್ಷವೂ ಬೇಕೇಬೇಕು. ಇದು ಸಾಮಾನ್ಯರಿಗೆ, ನಾರಕಿಗಳಿಗೆ ಏನೂ ಮಾಡಿದರೂ ಸಿಗುವುದಿಲ್ಲ. ಆ ವ್ಯವಸ್ಥೆ ಮಾಡಿಕೊಳ್ಳಲು ಅವರಲ್ಲಿ ಸಂಪತ್ತೂ ಇಲ್ಲ. ಧಾರ್ಮಿಕವಾಗಿ ಅವಕಾಶವೂ ಇಲ್ಲ. ಅಂಥವಳೇ ಇರಬೇಕು ಈ ಧೈರ್ಯಗಾತಿ ಹೆಣ್ಣು.

ಅವಳು ಹೇಳುತ್ತಾಳೆ : ಕರುಣೆ ಬಂದರೆ ಕಾಯಿ. ಮರಣ ಬಂದರೆ ಹೊಯ್ಯಿ. ನನ್ನ ಮೇಲೆ ನಿನ್ನ ಕರುಣೆ ಮಾತ್ರ ಕಡೆತನಕ ಇರಲಿ. ಆ ಕಡೆ ಎಂಬುದಕ್ಕೆ ಅಳತೆ ಇಲ್ಲ. ಅದು ಈ ಹೊತ್ತು, ನಾಳೆ ಅಥವಾ ನಾಡಿದ್ದು ಇರಬಹುದು ! ನಾನು ಇರುವವರೆಗೆ ನೀನು ಕಾಯಿ. ಅದನ್ನು ಬಿಟ್ಟು ದೀರ್ಘಾಯುಸ್ಸು, ಮೋಕ್ಷ ಅಥವಾ ಸ್ವರ್ಗವನ್ನು ಅವಳು ಕೇಳುತ್ತಿಲ್ಲ. ವಚನ ಧರ್ಮದ ಧೋರಣೆಯೆ ಅದಲ್ಲವೆ ! ದೇವರ ಜೊತೆಗೂ ದಾಕ್ಷಿಣ್ಯ ಇಲ್ಲ. ಇದು ಸ್ತ್ರೀ ಚೈತನ್ಯ. ಅವಳ ದೇಹ ಮಾತನಾಡುತ್ತಿಲ್ಲ. ಚೈತನ್ಯ ಮಾತನಾಡುತ್ತದೆ. ಆ ಚೈತನ್ಯಕ್ಕೆ ಸಾವಿಲ್ಲ, ನಿರಂತರ. ಈ ಹೆಣ್ಣೇ ನಿರಂತರ.

11. ಧರ್ಮ : ಆಚರಣೆ

ಧರ್ಮ ಎಂಬುದು ಒಂದು. ಅದು ಬೇರೆ ಬೇರೆ ಪ್ರಕಾರಗಳಲ್ಲಿ ತನ್ನನ್ನು ಕಾಣಿಸಿಕೊಳ್ಳುತ್ತದೆ. ಹಾಗೆ ಆಚರಣೆಗಳಲ್ಲಿ ಕೂಡ. ಧರ್ಮದ ವಿಚಾರ ಬಂದಾಗ ಶಿಷ್ಟ ಧರ್ಮದಂತೆ ಜನಪದ ಧರ್ಮವನ್ನು ನೋಡಲಾಗದು. ಶಿಷ್ಟ ಧರ್ಮ ಮೊತ್ತದ ಧರ್ಮ. ಅದಕ್ಕೆ ನಿರ್ದಿಷ್ಟಪಡಿಸಿದ ಸ್ಪಷ್ಟ ನಿಯಮಗಳಿರುತ್ತವೆ. ಅದರ ಆಚೆಗೆ ಅದು ಹೋಗುವುದಿಲ್ಲ. ಕಾಲ ಬದಲಾದರೂ ಅದರ ಮೂಲ ನಂಬಿಕೆ– ಆಚರಣೆಗಳಲ್ಲಿ ಬದಲಾವಣೆ ಆಗುವುದಿಲ್ಲ. 5ನೇ ಶತಮಾನದ ಮಹಾತಾಂತ್ರಿಕ ಯುಗ ನಮ್ಮ ಮುಂದೆ ಇದೆ. ಆದರೆ ಬ್ರಾಹ್ಮಣ ಮಠಗಳಲ್ಲಿ ಅವರು ಶೂದ್ರರ ಜೊತೆ ಸಹ

ಭೋಜನಕ್ಕೆ ಕೂರುವುದಿಲ್ಲ. ಅದು ಶೂದ್ರರ ಜೊತೆಗಿನ ಅಸ್ಪೃಶ್ಯತಾ ಆಚರಣೆ. ಜನಪದ ಧರ್ಮ ಅಂಥ ನಿರ್ಬಂಧಗಳಿಂದ ಕೂಡಿಲ್ಲ. ಅಲ್ಲಿ ಶಾಸ್ತ್ರ ಸೂತ್ರಗಳೂ ಇಲ್ಲ. ಮೂಲದ ಸಹ್ಯ ನೆನಪುಗಳನ್ನು ಉಳಿಸಿಕೊಂಡು ಸಮಕಾಲೀನ ಸಂದರ್ಭದಲ್ಲಿ ಜನಪರವಾಗಲು ಅದು ಶ್ರಮಿಸುತ್ತದೆ. ಹಾಗೆ ನೋಡಿದರೆ ಜನಪದ ಧರ್ಮ ಪಠ್ಯದಲ್ಲಿ ಇಲ್ಲ ; ಆಚರಣೆಯಲ್ಲಿದೆ. ಅಂಥ ಒಂದು ಆಚರಣೆಯನ್ನು ನೋಡಿ : ಡಾ. ಕೆ. ಚಿನ್ನಪ್ಪಗೌಡ ಅವರು ಕಾಸರಕನ ಮರಕ್ಕೆ ಸಂಬಂಧಿಸಿದ ವಿವರಗಳನ್ನು ಮಂಡಿಸುವುದು ಹೀಗೆ :–

"ಜೀವನಾವರ್ತನ ಆಚರಣೆಗಳಲ್ಲಿ ಕಂಡುಬರುವ ಸಂಪ್ರದಾಯಗಳಿಗೂ ಈ ಮರಕ್ಕೂ ಸಂಬಂಧವಿರುವುದು ಕಂಡು ಬರುತ್ತದೆ. ಮಗು ಹುಟ್ಟಿದ ಕೂಡಲೇ ಮನೆಯ ಮಾಡಿಗೆ ಈ ಮರದ ಗೆಲ್ಲನ್ನು ಇಡುತ್ತಾರೆ. ಬಾಣಂತಿಯ ಸ್ನಾನದ ಕೊಠಡಿಯಲ್ಲಿ ಇದರ ಗೆಲ್ಲನ್ನು ಮತ್ತು ಚಾಪೆಯಡಿಯಲ್ಲಿ ಸೊಪ್ಪನ್ನು ಇಡುತ್ತಾರೆ. ಮಗುವಿನ ತೊಟ್ಟಿಲಡಿಗೆ ಈ ಮರದ ಎಲೆಯನ್ನಿಡುತ್ತಾರೆ. ತೊಟ್ಟಿಲಿಗೆ ಮರದ ಸಣ್ಣ ತುಂಡನ್ನು ಕಟ್ಟುತ್ತಾರೆ. ಮನೆ ಮಾರು ಇಲ್ಲದ ಅಲೆಮಾರಿಗಳು ಕಾಸರಕನ ಮರದ ಬುಡದಲ್ಲಿ ಹೆರಲು ಇಚ್ಛಿಸುತ್ತಾರೆ. ವ್ಯಕ್ತಿಯೊಬ್ಬ ಸತ್ತರೆ ಆತನ ಚಿತೆಗೆ ಕಾಸರಕನ ಮರ ಉಪಯೋಗಿಸಬಾರದು. ಪ್ರೇತ, ಕುಲೆಯ ಬಾಧೆ ಹೆಚ್ಚಾದರೆ ಸತ್ತವನ ಗೋರಿಗೆ ಈ ಮರದ ಆಣಿಯನ್ನು ಬಡಿಯುತ್ತಾರೆ ಅಥವಾ ಒಂದು ಕಬ್ಬಿಣದ ತುಂಡನ್ನು ಗೋರಿಗೆ ಸುತ್ತು ತಂದು ಈ ಮರಕ್ಕೆ ಹೊಡೆಯುತ್ತಾರೆ".

"ಹುಟ್ಟಿನ ಸಂದರ್ಭದಲ್ಲಿ 'ಗಾಳಿಯ ಸೋಂಕು' ಎಂಬ ಕಾರಣಕ್ಕಾಗಿ ಮೇಲೆ ಹೇಳಿದ ಹಲವು ರೀತಿಯ ತಡೆ ಮಾಡುತ್ತಾರೆ. ಇಂತಹ ಕ್ರಿಯಾತ್ಮಕ ಆಚರಣೆಗಳು ಸೂತಕ ಮತ್ತು ರಕ್ಷಣೆಯ ಆಶಯವನ್ನು ಪಡೆದಿರುವಂತೆ ಕಂಡು ಬರುತ್ತದೆ. ಲೇಖಕರು ಈ ಬಗ್ಗೆ ಇನ್ನೂ ಸುದೀರ್ಘವಾದ ಮಾಹಿತಿ ನೀಡುತ್ತಾರೆ. ಇದನ್ನು ಓದುತ್ತಿದ್ದರೆ ಕರಾವಳಿಯ ಜನಸಾಮಾನ್ಯರ

ಜಗತ್ತು ಕಾಸರಕನ ಮರದ ಜೀವ ಜಗತ್ತಿನೊಂದಿಗೆ ಬೆಸೆದುಕೊಂಡಿರುವುದು ಕಂಡು ಬರುತ್ತಿದೆ. ಇಲ್ಲಿ ಈ ಮರವೇ ಒಂದು ದೈವ. ಅದರ ಸುತ್ತಣ ಜನಸಂಬಂಧಿ ಆಚರಣೆಯೆ ಧರ್ಮ. ಹೀಗಲ್ಲದೆ ಜನಪದ ಧರ್ಮ ಇಲ್ಲಸಲ್ಲದ ನಂಬಿಕೆಗಳ ಬೆನ್ನು ಹತ್ತಿ ಹೋಗುವುದಿಲ್ಲ. ನೆಲದ ಸಾಮಗ್ರಿಗಳ ಜೊತೆಗೆ ಒಡನಾಡುತ್ತಾ ಜೀವನವನ್ನು ಸಹ್ಯ ಮಾಡಿಕೊಳ್ಳುವುದೇ ಅದರ ತಾತ್ಪರ್ಯವಾಗಿದೆ.

ದೇವದಾಸಿಯರಿಗೆ ಮುತ್ತುಕಟ್ಟುವ ಹಾಗೂ ಬಸವಿ ಹರಕೆಯ ಒಂದು ಸಂದರ್ಭವನ್ನು ಗಮನಿಸಿ : ಅವರಿಂದ ಪ್ರಮಾಣ ತೆಗೆದುಕೊಳ್ಳುವುದು ಹೀಗೆ–

"(1) ಹಸಿದಿರುವೆನೆಂದರೆ ಊಟಕ್ಕೆ ಕೊಡಬೇಕು (2) ಬಿಸಿಲಿನಲ್ಲಿ ಇದ್ದರೆ ನೆರಳಿಗೆ ಕರೆಯಬೇಕು (3) ಗಂಡ ಹೆಂಡತಿಯ ಭೋಗ ದೃಶ್ಯ ನೋಡಬಾರದು, ನೋಡಿದರೂ ಯಾರಿಗೂ ಹೇಳಬಾರದು (4) ಸುಳ್ಳು ಹೇಳಬಾರದು (5) ಬರಿಗಾಲಿಂದ ನಡೆಯಬೇಕು (6) ಸತ್ತ ಸುದ್ದಿ ಕೇಳಿದರೆ ಊಟ ಮಾಡಬಾರದು (7) ಸಿಳ್ಳು ಹಾಕಿದರೆ ಕೊಳಲು ಊದಿದರೆ ಊಟ ಮಾಡಬಾರದು (8) ಎಂಜಲು ತಿನ್ನಬಾರದು (9) ಸೇಡು ತೀರಿಸಿಕೊಳ್ಳಬಾರದು (10) ಯಾರಿಂದಲೂ ಒದಿಸಿಕೊಳ್ಳಬಾರದು".*

ಇಂಥ ಮಾನವೀಯ ನಡವಳಿಕೆಯೆ ಜನಪದ ಧರ್ಮದ ತಿರುಳು. ನಾನು ಮೊದಲು ಉಳಿದವರು ಆಮೇಲೆ ಎಂಬ ಧರ್ಮ ಮಾನವೀಯ ಆಗಲಾರದು.

ಪುಟ: 15–16 ಜಾನಪದ ಸಾಹಿತ್ಯ ದರ್ಶನ ಭಾಗ–18.
ಕರ್ನಾಟಕ ವಿ.ವಿ. ಧಾರವಾಡ, 1993

ಪುಟ: 106 ಜಾನಪದ ಸಾಹಿತ್ಯ ದರ್ಶನ – 11,
ಕರ್ನಾಟಕ ವಿ.ವಿ. ಧಾರವಾಡ. 1987. ಲೇಖಕ : ಅರವಿಂದ ಮಾಲಗತ್ತಿ.

12. ಧರ್ಮ : ಗಾದೆ : ನೀತಿ

ಧರ್ಮವೆಂದರೆ ಒಂದು ಗಟ್ಟಿ ಪದಾರ್ಥ, ಒಂದು ನೀತಿಗಳ ಹೊರೆ, ತುಂಬ ತೂಕದ ಏನೊ ಒಂದು. ಧರ್ಮ ಆಡುವುದಕ್ಕೆ ಬರುವುದಿಲ್ಲ. ನೋಡುವುದಕ್ಕೆ ಬರುವುದಿಲ್ಲ. ಅದು ಆಚಾರಗಳಲ್ಲಿದೆ ಎಂದು ತಿಳಿದುಕೊಂಡವರಿಗೆ ಗಾದೆಗಳಲ್ಲೂ ಧರ್ಮವಿದೆಯೆ ಅನಿಸಬಹುದು. ಅಂತರಂಗವನ್ನು ಭೇದಿಸಿ ನೋಡಿದರೆ ಧರ್ಮ ಸೂಕ್ಷ್ಮ ಇರುವುದು ಗಾದೆಗಳಲ್ಲಿಯೆ ಎಂಬುದು ತಿಳಿಯುತ್ತದೆ. ಆದಕಾರಣವೇ ಗಾದೆ ವೇದದ ಮಾತು, ವೇದಕ್ಕೆ ಸಮ ಎಂದು ಹೇಳುತ್ತಿರುವುದು. ಒಂದು ಜನಪದದ ವಿವೇಕವಿರುವುದು ಗಾದೆಗಳಲ್ಲಿ. ಅಂಥ ವಿವೇಕದ ನಡವಳಿಕೆಯೇ ಧರ್ಮ. ಅದು ನಮ್ಮೊಳಗೆ ಇರುವುದು ಗಾದೆಯ ಮೂಲಕವೇ ವ್ಯಕ್ತವಾಗುತ್ತದೆ. ಅಂಥ ಕೆಲವು ಗಾದೆಗಳನ್ನು ನೋಡಿ :

1. ಉಪ್ಪು ತಿಂದವನು ನೀರು ಕುಡಿಯುತ್ತಾನೆ.
2. ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು

ಇವು ನೇರವಾಗಿ ಜೀವನ ಧರ್ಮವನ್ನು ಹೇಳುತ್ತವೆ. ಅದೆಂದರೆ ತಪ್ಪು ಮಾಡಿದವನಿಗೆ ಶಿಕ್ಷೆ ಇದೆ ಅಂತ.

1. ಬಡವನ ಹೆಂಡತಿ ಊರಿಗೆಲ್ಲಾ ಸೊಸೆ
2. ಬಡವಿ ಬಸ್ರಾಗಿ ಹೆರಕಾಗ್ದೆ ನಿಗತ್ಕಂಡ್ಲು

ಬಡವರು ಹೇಗೆ ಶೋಷಿಸಲ್ಪಡುತ್ತಾರೆ ಎಂಬುದನ್ನು ವ್ಯಂಗ್ಯೋಕ್ತಿಯಿಂದ ಹೇಳಲಾಗಿದೆ. ಅದು ಆಗಬಾರದು, ಹಾಗೆ ಮಾಡುವುದು ಅಧರ್ಮ ಎಂಬುದೆ ಇಲ್ಲಿನ ತಾತ್ಪರ್ಯ.

(3) ಅಸಾಸುರ್ನ ಹೆಂಡ್ತಿ ಕಸಾ ಸುರಿಯೋನ ಜೊತೆ ಹೋದ್ಲು

ಇದು ಶಿಷ್ಟ ಧರ್ಮದ ವಿಡಂಬನೆ ಹಾಗೂ ವಾಸ್ತವ ಧರ್ಮದ ಪ್ರತಿಪಾದನೆ. ಹೆಣ್ಣು ಮತ್ತು ಗಂಡು ಜೊತೆಯಾಗಿರುವುದು ಅವರು ಹೆಣ್ಣು–ಗಂಡು ಆಗಿರುವ ಕಾರಣಕ್ಕೆ. ಮತ್ತು ಅವರ ಬಯಕೆಯನ್ನು

ಪೂರೈಸಿಕೊಳ್ಳುವ ಕಾರಣಕ್ಕೆ. ಅದೇ ಕೈಗೂಡದಿದ್ದಾಗ ? ಹೆಣ್ಣು ಅಥವಾ ಗಂಡು ತನ್ನ ಸಹಜ ಅಪೇಕ್ಷೆಯನ್ನು ಹುಡುಕಿಕೊಳ್ಳುತ್ತದೆ, ಸಾಂಪ್ರದಾಯಿಕ ಬಂಧನವನ್ನಲ್ಲ.

(4) ಸಾವಿರ ವರ್ಷ ಸಾಮು ಮಾಡಿ ಸಾಯೋ ಮುದ್ಕಿ ಸೊಂಟ ಮುರಿದ.

ಯಾವ ಥರದ ಅವಿವೇಕಿಗಾದರೂ ಈ ಗಾದೆ ಅನ್ವಯಿಸುತ್ತದೆ. ಸಾಧನೆಗೆ ತಕ್ಕ ಕೆಲಸ ಇರಬೇಕು.

13. ಧರ್ಮ : ಶಿಷ್ಟ – ಜನಪದ, ತುಲನಾತ್ಮಕ

1. ನಾನು ಮತ್ತು ನಮ್ಮವರು ಎಂಬುದು ಒಂದು ಧರ್ಮ. ಇದು ಪುಸ್ತಕದಲ್ಲಿ ಇಲ್ಲ. ಜೀವನದೊಳಗೇ ಇದೆ. ಇದು ಪಠ್ಯ ಧರ್ಮ ಅಲ್ಲ, ಕ್ರಿಯಾಧರ್ಮ.

2. ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂಬುದು ಇನ್ನೊಂದು ಧರ್ಮ. ಇದು ಪಠ್ಯ ಧರ್ಮ. ಒಬ್ಬನಿಂದ ಅಥವಾ ಕೆಲವರಿಂದ ರಚಿಸಲ್ಪಟ್ಟು ಹಲವರಿಗೆ ಬೇರೆ ಬೇರೆ ರೀತಿಯಲ್ಲಿ ಪ್ರಸಾರವಾಗುವ ಧರ್ಮ. ಇದನ್ನು ಎತ್ತಿಕೊಂಡ ಅಥವಾ ಆಯ್ದುಕೊಂಡ (Extracted) ಧರ್ಮ ಎಂದು ಕರೆಯಬಹುದು. ಆಯ್ದುಕೊಂಡ ಧರ್ಮ ಶಿಷ್ಟಧರ್ಮ ಅಥವಾ ಮೊತ್ತದ ಧರ್ಮ (Capital Religion). ಈ ಮೊತ್ತದ ಧರ್ಮ ನಾವು ಸಾಕಿ – ಸಲಹಿ ಇಟ್ಟುಕೊಂಡಿರುವುದು. ಸಹಜವಾಗಿಯೆ ನಮ್ಮಲ್ಲಿ ಇರುವ ಧರ್ಮ ಜನಪದ ಅಥವಾ ಜೀವನ ಧರ್ಮ (People's Culture). ಗಾಂಧೀಜಿ ಪ್ರತಿಪಾದಿಸಿದ ಜೀವನ ಧರ್ಮ ಎಂಬುದು ಇದೇ ಧರ್ಮ. ಅದು ನಮ್ಮ ರಕ್ತ–ಮಾಂಸದಂತೆ ನಮ್ಮೊಂದಿಗೆ ಇದೆ. ಅದು ನಮ್ಮ ದೇಹವೂ ಹೌದು, ಜ್ಞಾನವೂ ಹೌದು. ಅನುಭವದ ಮೂಲಕ ಈ ಜ್ಞಾನ ತನಗೆ ತಾನೇ ಮನುಷ್ಯನ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತದೆ. ಶತ್ರು ಇದ್ದರೆ ಆತ ಹೊರಗಿರುವುದಿಲ್ಲ. ಅದರೊಳಗೇ ಪ್ರತಿ ನಾಯಕನಂತೆ ಬೆಳೆಯುತ್ತಾನೆ. ಅವನ ಉದ್ದೇಶ ಸಮಾಜವನ್ನು ಸಮಕಾಲೀನ ಗೊಳಿಸುವುದು.

ಶಿಷ್ಟ ಧರ್ಮ ಅದರ ತತ್ವಗಳನ್ನೇ ಜ್ಞಾನ ಎಂದು ಭ್ರಮಿಸಿಕೊಳ್ಳುತ್ತದೆ. ಪಾಪ, ಪೂರ್‌ಫೆಲೋಸ್. ಆದಗೂ ತಾನೇ ಶ್ರೇಷ್ಠ ಎಂದುಕೊಳ್ಳುತ್ತದೆ. ತುಂಡಾದ ಕಪ್ಪೆ ಕಾಲು ತಾನೇ ಕಪ್ಪೆ ಎಂದು ಭಾವಿಸಿಕೊಂಡಂತೆ. ನಮ್ಮ ಸ್ಪಷ್ಟ ಗ್ರಹಿಕೆಗಾಗಿ ಶಿಷ್ಟ ಹಾಗೂ ಜನಪದ ಎರಡೂ ಧರ್ಮದ ಒಳತಿರುಳನ್ನು ಪಟ್ಟಿ ಮಾಡಿ ತಿಳಿಯೋಣ.

2. ಶಿಷ್ಟ ಧರ್ಮ

1. ಮೊತ್ತದ ಧರ್ಮ
2. ಏಕ ಅಥವಾ ಕೆಲವು ವ್ಯಕ್ತಿಗಳಿಂದ ಪ್ರಣೀತ
3. ಒಂದು ಗುಂಪು / ವರ್ಗದ ಜ್ಞಾನ
4. ಕೇಂದ್ರೀಕೃತ ಜ್ಞಾನ
5. ಸಿದ್ಧ ಜ್ಞಾನ (ಫ್ಯಾಕ್ಟರಿ ಪ್ರಾಡಕ್ಟ್‌ನಂತೆ)
6. ಮೇಲು ಸ್ತರದ ಜ್ಞಾನ
7. ಸ್ವಂತ ಚಲನೆ ಇಲ್ಲದ್ದು
8. ಕೇವಲ ಮನುಷ್ಯ ಕೇಂದ್ರಿತ (ಹೊಟ್ಟೆ–ಬಟ್ಟೆ–ವಸತಿಗೆ ಸೀಮಿತ)
9. ನಿರ್ದಿಷ್ಟ ಚಿನ್ಹೆ / ಸಂಕೇತ ಆಧಾರಿತ
10. ಜನಪರ ಅಲ್ಲ
11. ಪ್ರಾಕೃತಿಕ ಅಲ್ಲ, ಕೃತಕ
12. ದುಬಾರಿ
13. ಕರ್ಮಫಲ ನಿರ್ಧಾರಿತ
14. ಕಾಲ್ಪನಿಕ
15. ತರಬೇತಿ ಅಪೇಕ್ಷಿತ
16. ದಂಡನೆಯ

ವಿವರಣೆ :

1) ಸಮ್ ಟೋಟಲ್ ಅನ್ನುತ್ತಾರಲ್ಲ ಹಾಗೆ. ಆಚೆ–ಈಚೆಗೆ ಅದು ಏನೂ ಅಲ್ಲ.

2) ಒಬ್ಬ ವ್ಯಕ್ತಿ ಮನುವಿನ ಥರ, ಕೆಲವು ವ್ಯಕ್ತಿಗಳು ಶಾಸ್ತ್ರಕಾರರಂತೆ ರಚಿಸಿದ್ದು.
3) ಒಂದು ಗುಂಪು ಹೇಳುವುದು ಉಳಿದ ಬಹುಸಂಖ್ಯಾತರು ಕೇಳುವುದು ಮಾತ್ರ.
4) ಹಿಂದೂ ಧರ್ಮ ಬ್ರಾಹ್ಮಣ–ಮಠ–ದೇವಸ್ಥಾನಗಳಲ್ಲಿ ಕೇಂದ್ರೀಕೃತ ಗೊಂಡಿರುವ ಹಾಗೆ.
5) ಪಠ್ಯವಾಗಿ ಸಿದ್ಧಪಡಿಸಿದ್ದು ಮಾತ್ರ ಧರ್ಮ, ಉಳಿದುದೆಲ್ಲ ಅಧರ್ಮ.
6) ಎಲ್ಲವೂ ಮೇಲಿನ ದೈವದಿಂದ ಬಂದುದೆಂಬ ನಿರ್ಧಾರ.
7) ಪ್ರಚಾರ–ಪ್ರಸಾರ–ಉಪದೇಶ–ಉವಾಚ ಮಾಡಿದರೆ ಅದು ಹರಡುತ್ತದೆ. ಇಲ್ಲದಿದ್ದಲ್ಲಿ ಬಿದ್ದಿರುವ ಕಡೆ ಇರುತ್ತದೆ.
8) ತಾನುಂಟು ಮೂರು ಲೋಕವುಂಟು ಎಂಬ ಮನುಷ್ಯ ಅಹಂಕಾರಕ್ಕೆ ಸಂಬಂಧಿಸಿದ್ದು, ಜೀವಸಂಕುಲವೇನಿದ್ದರೂ ಬಳಕೆಯ ಸಾಮಗ್ರಿ, ಹೆಣ್ಣು, ದಲಿತ ಸೇರಿ.
9) ಧರ್ಮದ ಅಸ್ತಿತ್ವ ಅದರ ಚಿನ್ಹೆಯಿಂದ ವ್ಯಕ್ತವಾಗುತ್ತದೆ. ಜನಿವಾರ, ಶಿವದಾರ, ಮೂರು ಉದ್ದ ನಾಮ ಅಥವಾ ಒಂದೇ ನಾಮ. ಹೀಗೆ –
10) ಜನರನ್ನು ಹತ್ತಿರ ಸೇರಿಸುವುದಿಲ್ಲ. ಊಟ ಮಾಡುವವರು ಕೆಲವರು ಮಾತ್ರ, ಕಾಣಿಕೆ ನೀಡುವವರು ಹಲವರು; ಭಕ್ತಿ, ಭವಿ, ಸೇವಕ ಇತ್ಯಾದಿ.
11) ಕೃತಕ ಸ್ವಭಾವ, ಎಲ್ಲರಂತೆ ಅಲ್ಲ. ಪೂಜಾರಿ, ಪುರೋಹಿತ ಮತ್ತು ಇತರರ ವೇಷ ಹಾಗೂ ಹಕ್ಕುದಾರಿಕೆಯನ್ನು ಗಮನಿಸಬಹುದು.
12) ಕೈ ಬದಲಾಯಿಸಲು ಸಾಧ್ಯವಿಲ್ಲ. ಸ್ಮಾರ್ತ ಅಂದರೆ ಅದೆ. ವೈಷ್ಣವ ಎಂದರೆ, ಮಾಧ್ವ ಎಂದರೆ ಅದೆ...
13) ಹುಟ್ಟು–ಬದುಕು–ಸಾವು ಎಲ್ಲ ಕರ್ಮ ಫಲಗಳು. ಭವಿ–ನಾರಕಿ, ಶ್ರೇಷ್ಠ ಬೇರೆ ಬೇರೆ.

14) ಬಹುತೇಕ ಕಲ್ಪಿಸಿಕೊಂಡದ್ದು. ಉದಾ : ಸ್ವರ್ಗ–ನರಕಗಳ ವಿವರಣೆ. ಬಂಡಲ್.

15) ಶ್ರಮವಹಿಸಿ ಕಲಿತರೆ ಮಾತ್ರ. ಉದಾ : ತ್ರಿವೇದಿ, ಚತುರ್ವೇದಿ... ಹೀಗೆ

16) ಕಾಮವನ್ನು ಕೊಲ್ಲಬೇಕೆಂಬ ಸಿದ್ಧಾಂತ

ಜನಪದ ಧರ್ಮ

1) ಕೂಡಿ – ಕಳೆಯುತ್ತಾ – ಕೂಡುತ್ತಾ ಹೋಗುವುದು
2) ಜನರ ಅನುಭವ ಜ್ಞಾನ
3) ಅದೊಂದು ಲೋಕ ಜ್ಞಾನ
4) ವಿಕೇಂದ್ರೀಕೃತ ಜ್ಞಾನ
5) ಹರಡಿಕೊಂಡಿರುವ ಜ್ಞಾನ, ಸಹಭಾಗಿತ್ವದ ಜ್ಞಾನ
6) ನೆಲದ ಜ್ಞಾನ
7) ಸ್ವ ಚಲಿತ
8) ಜೀವಕೇಂದ್ರಿತ
9) ಸಂಕೇತರಹಿತ
10) ಜನಪರ
11) ಪ್ರಾಕೃತಿಕ
12) ಸುಲಭಸಾಧ್ಯ
13) ಧರ್ಮ–ಕರ್ಮ ಸಮನ್ವಯ
14) ವಾಸ್ತವ
15) ಮೌಖಿಕ
16) ಸ್ವತಂತ್ರ ಪ್ರವೃತ್ತಿ

ವಿವರಣೆ :

1. ಕ್ರಿಯಾಧರ್ಮಕ್ಕೆ ಮೊತ್ತ ಇಲ್ಲ, ಸಂಗ್ರಹ ಇಲ್ಲ. ಇದ್ದಷ್ಟು ಬಳಸು ಇಲ್ಲದ್ದಕ್ಕೆ ಹೊಂದಿಕೊ

2. ಧರ್ಮ–ಕರ್ಮ ಪಂಚಾಯ್ತಿ ಹೇಳುವ ಹಿರಿತನ ಉಂಟು. ಅದು ಹೋಗುತ್ತದೆ ಮತ್ತೆ ಜನರ ಮಧ್ಯೆಯಿಂದ ಬರುತ್ತದೆ.
3. ಪ್ರತಿ ಜನಪದಕ್ಕೆ ತನ್ನ ಜ್ಞಾನ ಲೋಕಜ್ಞಾನ. ಆ ಮೂಲಕ ಇತರ ಜಗತ್ತನ್ನು ಅರ್ಥೈಸಿಕೊಳ್ಳುತ್ತಾನೆ. ಶಾಸ್ತ್ರ–ಸೂತ್ರಗಳಿಂದ ಅಲ್ಲ.
4. ಧರ್ಮ ಇರುವುದೇ ಪರಸ್ಪರರು ಹಂಚಿಕೊಳ್ಳಲು. ಒಬ್ಬನ ಅಥವಾ ಕೆಲವರ ಬಂಡವಾಳ ವೃದ್ಧಿಗೆ ಅಲ್ಲ.
5. ಸರಳ, ಸಹಜ ಜ್ಞಾನ. ಎಲ್ಲರ ಜ್ಞಾನ.
6. ನೆಲದಿಂದ ಹುಟ್ಟಿದ ಜ್ಞಾನ. ಗಣಪತಿ ಸಗಣಿಯಿಂದಲೇ ಆಗುತ್ತದೆ. ದೇವರು ಒಂದು ಅಥವಾ ಮೂರು ಕಲ್ಲಿನಿಂದ ಆಗುತ್ತವೆ.
7. ಯಾರೂ ಹರಡಬೇಕಿಲ್ಲ. ಗಾಳಿಯಂತೆ, ನೀರಿನಂತೆ ಎಲ್ಲರಿಗೂ ಲಭ್ಯ.
8. ಪ್ರಾಣಿಗಳ ಜೊತೆಗೆ ಧರ್ಮ–ವಾಸ–ಪರಸ್ಪರ ಪ್ರೀತಿ ಕೊಳು ಕೊಡುಗೆ.
9. ಇದ್ದ ಹಾಗೆ ಇರುವುದು. ತಮ್ಮನ್ನು ಸಂಕೇತಗಳಿಗೆ ವರ್ಗಾಯಿಸುವುದಿಲ್ಲ.
10. ಮೊದಲು ತನ್ನ ಸಮೂಹದ ಪರ ಇದ್ದು ನಂತರ ಬೇರೆಡೆ ಸಮೂಹಗಳತ್ತ ಕೈಚಾಚುತ್ತದೆ.
11. ಪ್ರಕೃತಿಯ ಜೊತೆಗೆ ಹುಟ್ಟಿ ಬೆಳೆಯುತ್ತದೆ. ದೇವರನ್ನೂ, ಧರ್ಮ, ನಿಯಮಗಳನ್ನೂ ಪ್ರಾಕೃತಿಕ ಸಂದರ್ಭಗಳೊಡನೆ ಹೊಂದಿಸಿಕೊಂಡು ರೂಪಿಸಿಕೊಳ್ಳುತ್ತದೆ.
12. ಜನಪದ ಧರ್ಮವನ್ನು ಪಡೆಯಲು ತಿಣುಕಬೇಕಿಲ್ಲ. ಮಾನವತೆ ತೋರಿದರೆ ಸಾಕು.
13. ಹುಟ್ಟು–ಬದುಕು–ಸಾವನ್ನು ವೈಭವೀಕರಿಸಲು ಹೋಗುವುದಿಲ್ಲ. ಇದು ಸಾವಿಗೆ ಹೆದರದ ಧರ್ಮ.
14. ಜನಪದ ಧರ್ಮ ಜನರಿಂದಲೇ ಹುಟ್ಟಿದುದರಿಂದ ಇದು ಆರೋಪಿತ ಧರ್ಮ ಅಲ್ಲ. ಜೊತೆಗೆ ಬಂದ ಧರ್ಮ.
15. ಇದನ್ನು ಪಡೆಯಲು ಯಾವ ಪಠ್ಯಕ್ಕೂ ಹೋಗಬೇಕಿಲ್ಲ. ಹಿರಿಯರ ಅನುಭವವನ್ನು ಅನುಸರಿಸಿದರೆ ಸಾಕು.

16. ಅರ್ಥ–ಕಾಮಗಳೇ ಜನಪದ ಧರ್ಮದ ಜೀವಾಳವಾಗಿದೆ. ಧರ್ಮ–ಅರ್ಥ–ಕಾಮ–ಮೋಕ್ಷದಲ್ಲಿ ಮೊದಲದು ಮತ್ತು ಕೊನೆಯದು ಸುಖ ಜೀವಿಗಳ ರಕ್ಷಣೆ ಮತ್ತು ಸಂರಕ್ಷಣೆ.

14. ಧರ್ಮ–ದೇವರು–ಮನುಷ್ಯ ; ಸಂಯೋಗ

ಜನಪದ ಧರ್ಮವನ್ನು ಪ್ರಾಯೋಗಿಕತೆಯಲ್ಲಿ ವಿವರಿಸಲು ನಾನು ಎರಡು ಉದಾಹರಣೆಗಳನ್ನು ತೆಗೆದುಕೊಳ್ಳುತ್ತೇನೆ. ನಮ್ಮ ಗ್ರಾಮ ದೇವತೆಗಳನ್ನು ನೋಡಿರಿ. ಅವು ಮೂಲತಃ ಗ್ರಾಮದ ತಾಯಿ/ತಂದೆಯರು. ಪ್ರಯೋಗದಲ್ಲಿ ಗ್ರಾಮವೈದ್ಯರು. ಮಳೆ ಬೆಳೆ ಕೊಡುವಲ್ಲಿ ನೀರು ದೇವತೆಗಳು, ಸಮಾಜವನ್ನು ರಕ್ಷಿಸುವಲ್ಲಿ ಕಾವಲುದಾರರು.

ನಾನು ನೋಡಿದ ಊರ ಜಾತ್ರೆ. ಕೊನೆಯ ದಿನ ದೇವತೆ ತನ್ನ ಪೂಜಾರಿ ಮೈಮೇಲೆ ಬಂದು ಜನರ ಕಷ್ಟ ಸ್ವೀಕಾರ ಮತ್ತು ಆಶೀರ್ವಾದ ಮಾಡುತ್ತಿದ್ದಾಳೆ. ಅವಳ ಮುಂದೆ ನಾನಾ ಬಗೆಯ ಭಕ್ತರು, ನಾನಾ ಬಗೆಯ ಬೇಡಿಕೆ ಹಾಗೂ ಅರ್ಪಣೆಗಳನ್ನು ಮಾಡುತ್ತಿದ್ದಾರೆ.

ಒಬ್ಬ ಭಕ್ತೆ ಕೂಲಿನಾಲಿ ಮಾಡುವವಳು. ಅವಳು ಕಷ್ಟಪಟ್ಟು ಹಣ ಕೂಡಿಸಿ ತನ್ನ ಹರಕೆ ತೀರಿಸಲು ಒಂದು ಸೀರೆಯನ್ನು ತಂದು ದೇವಿಗೆ ಅರ್ಪಿಸಿದ್ದಾಳೆ. ಅದನ್ನು ಹಾಗೆ ದೇವತೆಗೆ ತಾಕಿಸಿ ಸ್ವತಃ ಉಟ್ಟುಕೊಳ್ಳಲು ಬಯಸಿದ್ದಾಳೆ. ದೇವತೆ ಮುಂದೆ ಅದನ್ನು ಇಟ್ಟಳು. ದೇವಿ ಅದನ್ನು ಮುಟ್ಟಿದಳು. ಸಂತೋಷದಿಂದ ಹೇಳಿದಳು. ಪಕ್ಕದಲ್ಲಿ ನಿನ್ನಂಥ ಬಡಭಕ್ತೆಯೊಬ್ಬಳು ಇದ್ದಾಳೆ. ಈ ಸೀರೆಯನ್ನು ಒಂದು ದಿನ ಅವಳಿಗೆ ಉಡಲು ಕೊಡು ನಿನಗೆ ಒಳ್ಳೆಯದಾಗುತ್ತದೆ ಎಂದಳು. ಈ ಸನ್ನಿವೇಶವನ್ನು ನಾನು ಉನ್ನತೋನ್ನತ ಧಾರ್ಮಿಕ ಸಂದರ್ಭ ಎಂದು ಕರೆಯುತ್ತೇನೆ. ಇರುವವಳು ಮತ್ತು ಇಲ್ಲದವಳು ಏಕಕಾಲದಲ್ಲಿ ಸಂತೋಷಪಡುವಂತೆ ಮಾಡಿದ ದೇವತೆ ಮತ್ತು ಆಕೆ ಸೂಚಿಸಿದ ಧರ್ಮ ಅಪ್ರಮೇಯವಾದುದು. ಇಲ್ಲಿ ಜನಪದ ಧರ್ಮ ಊರ್ಜಿತಗೊಂಡಿದೆ.

ಎರಡನೆಯ ಉದಾಹರಣೆ 'ಸಂತೆಗೆ ಹೋದನು ಭೀಮಣ್ಣ' ಎಂಬ

ಮಕ್ಕಳ ಪದ್ಯ. ಇದು ಪ್ರಾಥಮಿಕ ಶಾಲೆ ಮಕ್ಕಳಿಗೆ ಇರುವ ಪಾಠ. ಭೀಮಣ್ಣ ಸಂತೆಗೆ ಹೋದ. ಹತ್ತು ಮಣ ಹಿಂಡಿಯನ್ನು ಕೊಂಡ. ಕತ್ತೆ ಬೆನ್ನಿಗೆ ಏರಿಸಿದ. ಕುದುರೆಯ ಜೊತೆಯಲಿ ಸಾಗಿಸಿದ. ನಡುಗಿದವು ಕತ್ತೆಯ ಕಾಲುಗಳು. ನೀನು ಸ್ವಲ್ಪ ಭಾರ ಹೊತ್ತುಕೊ ಎಂದು ಕುದುರೆಯನ್ನು ಬೇಡಿತು ಕತ್ತೆ. ಆಗದಾಗದು ನಾನು ಯಜಮಾನನನ್ನು ಹೊರುವುದೇ ಹೊರತು ಬೇರೆ ಹೊರೆಯನ್ನಲ್ಲ ಎಂದಿತು ಕುದುರೆ. ಕತ್ತೆ ಭಾರ ತಾಳಲಾರದೆ ಕುಸಿದು ಬಿತ್ತು. ಭೀಮಣ್ಣ ಬಂದ. ಕತ್ತೆ ಸ್ಥಿತಿ ನೋಡಿದ. ಅದರ ಮೇಲಿದ್ದ ಭಾರವನ್ನು ಕುದುರೆ ಬೆನ್ನಿಗೆ ಹಾಕಿದ. ಕತ್ತೆ ಜೊತೆಗೆ ಸಾಗಿಸಿದ. ಕುದುರೆಗೆ ಬಾರ ಹೆಚ್ಚಾಯಿತು. ಕಾಲುಗಳು ನಡುಗಿದವು. ಕತ್ತೆಯನ್ನು ಗೋಗರೆಯಿತು. ಕತ್ತೆ ಹೇಳಿತು; ನೀನು ನನ್ನ ಕಷ್ಟದಲ್ಲಿ ಆಗಲಿಲ್ಲ. ನೀನು ನೆರವಾಗಿದ್ದರೆ ನಾನೂ ನೆರವಾಗುತ್ತಿದ್ದೆ ಎಂದಿತು. ಆಮೇಲೆ ಹೊರೆಯನ್ನು ಹಂಚಿ ಕೊಂಡಿತು.

ಕುದುರೆ ತಾನು ದೊಡ್ಡವನಾಗದೆ ಚಿಕ್ಕವ ಎನಿಸಿಕೊಂಡುಬಿಟ್ಟೆ ಎಂದು ಪಶ್ಚಾತ್ತಾಪವಾಯಿತು. ಕತ್ತೆಗೆ ತಾನು ಕುದುರೆಗೆ ಜೀವನ ಪ್ರೀತಿಯನ್ನು ಕಲಿಸಿಕೊಟ್ಟೆ ಎಂಬ ಧನ್ಯತಾಭಾವ ಮೂಡಿತು. ತನಗೂ ಹೇಳುವುದಕ್ಕೆ ಇದೆ ಎಂದು ಅದಕ್ಕೆ ಸಮಾಧಾನವಾಯಿತು. ಈ ಸಂದರ್ಭದ ಹೊರಗೆ ಧರ್ಮ ಇರಲಾರದು ಎಂಬ ಭಾವ ನನ್ನದು. ಸಂಸ್ಕಾರವೆಂಬುದು ಸಂದರ್ಭದ ಅರಿವೇ ಹೊರತು ಕಲ್ಪಿಸಿಕೊಂಡ ನಂಬಿಕೆ ಅಲ್ಲ. ಧರ್ಮಸಂಸ್ಕಾರದ ಬಗ್ಗೆ ಹೊರಗಿನಿಂದ ಉತ್ತರ ಕಂಡು ಕೇಳುವುದಕ್ಕಿಂತ ಬದುಕಿನ ಒಳಗೆ ಕಂಡುಕೊಂಡರೆ ಅವಕ್ಕೆ ಬಂಗಾರದ ಬೆಲೆ ಇರುತ್ತದೆ. ಸಮಾಜದ ಒಳಗೆ ದಿನನಿತ್ಯ ಇಂಥ ಅನೇಕ ಘಟನೆಗಳು ನಡೆಯುತ್ತವೆ. ಆಯಾ ಸಂದರ್ಭಗಳಲ್ಲಿ ಧರ್ಮವು ಮಿಂಚಿ ಬದುಕನ್ನು ಸಾವಧಾನ ನಡೆಸುತ್ತದೆ. ಧರ್ಮ ಎಂಬುದು ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಮತ್ತೆಲ್ಲೋ ಸಂಗ್ರಹಗೊಂಡಿರುವುದಿಲ್ಲ. ಅದು ನಮ್ಮ ನಡೆ-ನುಡಿ, ಓಡಾಟ-ಆಡಾಟಗಳಲ್ಲಿ ನಮ್ಮೊಂದಿಗೆ ಇದೆ. ಅದೇ ಜನಪದ ಧರ್ಮ.

ಧರ್ಮ ಆಹಾರ

ನಿಜವಾದ ಧರ್ಮ ಆಹಾರದ ನಿರ್ಬಂಧವನ್ನು ಇಟ್ಟುಕೊಳ್ಳುವುದಿಲ್ಲ. ಧರ್ಮಕ್ಕೂ ಆಹಾರಕ್ಕೂ ಅನ್ಯೋನ್ಯ ಸಂಬಂಧ ಇಲ್ಲ. ನಿರ್ಗತಿಕರಿಗೆ ಆಹಾರವನ್ನು ದಾನ ಮಾಡುವುದರಿಂದ ಧರ್ಮ ಲಭ್ಯವಾಗುತ್ತದೆ. ಕೆಲವರು ಆಹಾರ ನಿರ್ಬಂಧ ಹೇರುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಕೋಟಿ ಮೊಟ್ಟೆ ಹಂಚಬಾರದು ಎಂದು ಕೆಲವರು ತಾಕೀತು ಮಾಡಿದರು. ಅದರಿಂದ ಬಡವರ ಮಕ್ಕಳಿಗೆ ಒಳ್ಳೆಯ ಆಹಾರ ಸಿಗುವುದು ಇಲ್ಲವಾಯಿತು. ಹೀಗೆ ಮಾಡುವುದು ಅಧರ್ಮ. ಶಿಷ್ಟ ಧರ್ಮ ಹೇಗೆ ತನಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುತ್ತದೋ ಹಾಗೆಯೆ ಜನಪದರು ತಮಗೆ ಹಿತವಾದ ಮತ್ತು ಒಗ್ಗಿದ ಆಹಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆಹಾರ ಸೇವನೆ ಅವರವರ ಆಯ್ಕೆಯೂ ಹೌದು, ಧರ್ಮವೂ ಹೌದು.

ತರಕಾರಿಗಳಲ್ಲಿ ಪ್ರಾಣ ಇರುವುದಿಲ್ಲವೆಂದೂ ಪ್ರಾಣಿಗಳಲ್ಲಿ ಮಾತ್ರ ಪ್ರಾಣ ಇರುತ್ತದೆ ಎಂದೂ ತಿಳಿದುಕೊಂಡ ಅವೈಜ್ಞಾನಿಕತೆಯಿಂದ ಈ ಬಗೆಯ ನಂಬಿಕೆ ಬರುತ್ತದೆ. ತರಕಾರಿಗಳಲ್ಲೂ ಪ್ರಾಣ ಇರುತ್ತದೆ. ಮಾತು ಬರುವುದಿಲ್ಲ ಅಷ್ಟೆ. ನಾವು ಪ್ರಾಣಿಗಳಿಗೂ ಇತರ ಪ್ರಾಣಿಗಳನ್ನು ಕೊಲ್ಲಬಾರದು ಎಂಬುದು ಈ ಹೊತ್ತಿನ ಧರ್ಮ. ಪೂರ್ವದಲ್ಲಿ ಪ್ರಾಣಿಗಳಲ್ಲಿ ಬೇಟೆಯಾಡದೆ ಮನುಷ್ಯ ಅಸ್ತಿತ್ವದಲ್ಲಿ ಇರಲು ಸಾಧ್ಯವಿರಲಿಲ್ಲ. ನಿಸರ್ಗವೇ ಪ್ರಾಣಿ ಬಲಿಯನ್ನು ನಿಯಮ ಮಾಡಿದೆ. ಮಾಂಸಾ ಆಹಾರವಿಲ್ಲದೆ ಕೆಲವು ಜೀವಿಗಳು ಬದುಕುವುದೇ ಇಲ್ಲ. ಅದು ಅವಶ್ಯ ಇಂಥ ಅವಶ್ಯಕತೆಯ ಮೇಲೆಯೇ ಮಾನವ ಕುಲ ಬದುಕಿರುವುದು. ಆದ್ದರಿಂದ ಆಹಾರ ಅವಶ್ಯಕತೆ ಮತ್ತು ಜೀವನ ಧರ್ಮ. ದುರುಪಯೋಗ ಅಪರಾಧ

ಧರ್ಮ–ಹಿಂಸೆ

ಕೊಲ್ಲುವುದು ಹಿಂಸೆಯಾದರೆ, ಕದಿಯುವುದು, ಮೋಸ ಮಾಡುವುದು, ಇನ್ನೊಬ್ಬರ ಆಹಾರವನ್ನು ತಡೆಯುವುದು, ಅಸ್ತಿತ್ವವನ್ನು ಪ್ರಶ್ನಿಸುವುದು ಕೂಡ ಹಿಂಸೆಯೇ. ಅಭಿವೃದ್ಧಿಯ ಹೆಸರಿನಲ್ಲಿ ಲಕ್ಷಾಂತರ ಆದಿವಾಸಿಗಳನ್ನು

ನಿರ್ಗತಿಕರನ್ನಾಗಿ ಮಾಡುತ್ತಿರುವುದು ಕೂಡ ದೊಡ್ಡ ಹಿಂಸೆ. ಸ್ವಂತ ಬದುಕಿಗಾಗಿ ಬೇರೆಯವರ ವಿರುದ್ಧ ತಂತ್ರಗಾರಿಕೆ ಮಾಡಿ ಅವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ನಿರಂತರ ಹಿಂಸೆ. ನಮ್ಮ ಶಿಷ್ಟ ಧರ್ಮಗಳು ಹಿಂಸೆಯ ವಿರುದ್ಧ ಮಾತನಾಡುತ್ತವೆಯಾದರೂ ಅವು ಸಂಘಟಿತವಾಗಿರುವುದು ಹಿಂಸೆಯ ಮೂಲಕವೆ. ಅಂಥ ಹಿಂಸೆಯನ್ನೆ ಅವು ಧಾರ್ಮಿಕ ಕಾನೂನುಗಳನ್ನಾಗಿ ಮಾಡಿಕೊಂಡಿವೆ. ಮನುಧರ್ಮ ಶಾಸ್ತ್ರದಲ್ಲಿ ಶೂದ್ರರಿಗೆ ಮತ್ತು ದಲಿತರಿಗೆ ವಿಧಿಸಿರುವ ಕಟ್ಟು ಕಟ್ಟಳೆಗಳನ್ನು ನೋಡಿದರೆ ಆ ಜನ ಎಷ್ಟು ಹಿಂಸೆ ಅನುಭವಿಸಿದ್ದಾರೆ ಎಂಬುದನ್ನು ಊಹಿಸಿಕೊಳ್ಳಲೂ ಕಷ್ಟವಾಗುತ್ತದೆ.

ಜನಪದ ಧರ್ಮ ಸಹಕಾರ ತತ್ವದ ಮೇಲೆ ನೆಲೆನಿಂತಿದೆ. ಅದು ಮಠ–ಮಾನ್ಯಗಳ ಧರ್ಮ ಅಲ್ಲ. ತಾರತಮ್ಯ ಮಾಡುವ ಸಮಾಜ ಅಲ್ಲ. ಅಸ್ಪೃಶ್ಯತೆ ಒಂದು ದೊಡ್ಡ ಹಿಂಸೆಯಲ್ಲವೆ ? ಅದು ಜಾತಿ ತಾರತಮ್ಯದ ಮೇಲೆ ಹುಟ್ಟಿದು. ಜನಪದ ಸಮಾಜಕ್ಕೆ ಜಾತಿ ಮುಖ್ಯವಲ್ಲ. ಕುಲ, ಬುಡಕಟ್ಟು, ಪಂಗಡ, ಕಳ್ಳು–ಬಳ್ಳಿ, ರಕ್ತಸಂಬಂಧ ಮುಖ್ಯ. ಜನಪದ ಮಾಂಸಾಹಾರವನ್ನು ಹೆಚ್ಚಿನ ಆಹಾರವಾಗಿ ಬಳಸುತ್ತದೆಯೆ ಹೊರತು ಅತ್ಯಾಧುನಿಕದಂತೆ ಮಸ್ತಿ ಮೋಜಿಗಾಗಿ ಬಳಸುವುದಿಲ್ಲ. ಬೇಡರಕಣ್ಣಪ್ಪ ಶಿವಲಿಂಗಕ್ಕೆ ಮಾಂಸವನ್ನು ಅರ್ಪಿಸಿದ. ಅದು ಆಹಾರವನ್ನು ಹಂಚಿಕೊಳ್ಳುವ ಕಾರಣಕ್ಕಾಗಿ, ಬಲಿಯಾಗಿ ಅಲ್ಲ..

ಧರ್ಮ–ಸಂಸ್ಕೃತಿ

ಮನುಷ್ಯ ಪ್ರಕೃತಿಯನ್ನು ಪಳಗಿಸಿ ತನ್ನ ಜೀವನಕ್ಕೆ ವ್ಯವಸ್ಥೆ ಮಾಡಿಕೊಳ್ಳುವ ಕ್ರಮವೆ ಸಂಸ್ಕೃತಿ. ಅದು ನಿತ್ಯ ಮತ್ತು ನಿರಂತರ. ಅದಕ್ಕೆ ಸ್ತಬ್ಧತೆ ಇಲ್ಲ. ಮಡಿ–ಮೈಲಿಗೆ ಇಲ್ಲ. ಮೇಲು–ಕೀಳು ಇಲ್ಲ. ದರ್ಪ–ದಬ್ಬಾಳಿಕೆ ಇಲ್ಲ. ಜನಸಾಮಾನ್ಯರಂತೆ ಸಾಮಾನ್ಯವಾಗಿರುವುದೇ ಸಂಸ್ಕೃತಿಯ ಮೂಲ ಸ್ವಭಾವ. ಅದನ್ನು ಯಾರೂ ಹಂಚಿಕೊಳ್ಳಬಹುದು, ಬಳಸಿ ಕೊಳ್ಳಬಹುದು ಮತ್ತು ಬಿಡಬಹುದು. ಅದು ಮನುಷ್ಯನ ಸಹಜ ನಡವಳಿಕೆ.

ಕೆಲಮಟ್ಟಿಗೆ ಅದು ಪ್ರಾಣಿಗಳಲ್ಲೂ ಸಂಯೋಜನೆಗೊಂಡಿದೆ. ಹಾಗೆ ನೋಡಿದರೆ ಅದೇ ಜೀವನದ ಧರ್ಮ. ಜೀವಿಸುವುದಕ್ಕಾಗಿ ಧರ್ಮ; ಸಂಗ್ರಹಕ್ಕಾಗಿ, ಯಜಮಾನಿಕೆಗಾಗಿ, ಪ್ರತ್ಯೇಕತೆಗಾಗಿ, ಬೇರೆಯವರನ್ನು ಹದ್ದುಬಸ್ತಿನಲ್ಲಿಡುವುದಕ್ಕಾಗಿ, ದುಡಿಯುವವರನ್ನು ಗುಲಾಮರನ್ನಾಗಿ ಮಾಡಿಕೊಳ್ಳಲು ಅಲ್ಲ.

ಧರ್ಮ ಜೀವನಧರ್ಮ ಪ್ರತ್ಯೇಕ ಎಂಬ ಎರಡು ಪರಿಕಲ್ಪನೆಗಳು ಬೇರೆ–ಬೇರೆ. ಧರ್ಮ ಸಹಜ ಜೀವನವೇ ಆದಾಗ ಅದು ಸಂಸ್ಕೃತಿಯಲ್ಲದೆ ಬೇರೆ ಅಲ್ಲ. ಧರ್ಮ ಪ್ರತ್ಯೇಕವಾದಾಗ ಅದು ಜಾತಿ, ಪಂಥ, ಮತ ಹೀಗೆ ಏನೆಲ್ಲ ಅವಾಂತರ–ಅವಸ್ಥಾಂತರಗಳನ್ನು ಹೊಂದುತ್ತದೆ. ಜಾತಿ ಜೀವನದ ಧರ್ಮ ಅಲ್ಲ. ಮತವೂ ಜೀವನದ ಧರ್ಮವಲ್ಲ. ಮನುಷ್ಯ ಮನುಷ್ಯನಂತೆ ಬದುಕುವುದು ಜೀವನ ಧರ್ಮ. ಉಳಿದುವೆಲ್ಲ ಧರ್ಮದ ಹೆಸರಿನ ಅಧರ್ಮಗಳು. ಜನಪದ ದರ್ಮ ಮನುಷ್ಯ ಧರ್ಮ, ಅದುವೇ ಜೀವನದ ಧರ್ಮ. ಉಳಿದವು ಧರ್ಮದ ಹೆಸರಿನ ಸುಲಿಗೆಗಳು.

ಜನಪದ ಧರ್ಮದ ದೇವರು

ಜನಪದಕ್ಕೆ ನಿರ್ದಿಷ್ಟ ದೇವರು ಅಂತ ಇಲ್ಲ ಒಮ್ಮೆ ಅಡಿಗೆ ಮಾಡುವ ಒಲೆ ದೇವರು, ಒಮ್ಮೆ ರಾಗಿ ಬೀಸುವ ಕಲ್ಲು ದೇವರು. ಮತ್ತೊಮ್ಮೆ ಗೂಡಿನಲ್ಲಿ ಇರುವ ದೀಪ ದೇವರು ; ಒಳಗೂ ದೇವರು–ಹೊರಗೂ ದೇವರು. ಅವುಗಳ ಆಕಾರವೂ ಬಹುಮುಖಿ. ಒಂದು ಕಲ್ಲು, ಒಂದು ಸಗಣಿ ಉಂಡೆ, ಒಂದು ಮರ, ಒಂದು ಪಕ್ಷಿ ಹೀಗೆ ನೂರಾರು. ಅವುಗಳ ಸ್ಥಾನ–ಮಾನವೂ ವಿಭಿನ್ನ. ಒಂದೊಂದು ಸಮಸ್ಯೆಗೆ ಒಂದೊಂದು ದೇವರು. ಅಲ್ಲಿ ಮನೆ ದೇವರೂ ಉಂಟು. ಮೊರೆ ಬಿದ್ದ ದೇವರೂ ಉಂಟು. ವೈಯಕ್ತಿಕವಾದ ದೇವರು ಕೂಡ ಉಂಟು. ಸೂರ್ಯ, ಚಂದ್ರ, ನಕ್ಷತ್ರ, ಭೂಮಿ, ಮಣ್ಣು, ಕಲ್ಲು, ಮರ... ಹೀಗೆ ನೂರು ದೇವರು. ನೂರು ಜನ. ನೂರು ಸಂಸ್ಕೃತಿಗಳು. ಎಲ್ಲಕ್ಕಿಂತ ಹೆಚ್ಚಾಗಿ ತಾಯಿಯೆ ಮೂಲ ಹಾಗೂ ಮುಖ್ಯ ದೇವತೆ. ಜನ್ಮ ನೀಡುವ ಅವಳೆ ಆದಿದೇವತೆ.

ಇಲ್ಲಿಯ ದೇವರುಗಳು ವೀರಾಧಿವೀರರೂ, ಶೂರರೂ, ಮಹಾತ್ಮರೂ, ಪ್ರಭುಗಳೆಂಬ ಯಜಮಾನರುಗಳಲ್ಲ. ಮೊದಲಾಗಿ ದೇವರು ಸಹೋದರತ್ವದವರು, ಆಮೇಲೆ ಸ್ನೇಹಿತರು. ಮುಂದುವರಿದು ಹಿತೈಷಿಗಳು. ಸಂರಕ್ಷಕರು, ಮಾರ್ಗದರ್ಶಕರು, ಸಹಾಯಕರು. ಬಹಳ ಮುಖ್ಯವಾಗಿ ಅವರು ವೈದ್ಯರು. ಅವರ ಮನೆ ತಾವಿಗೆ ನಾವು ಹೋಗಬೇಕೆಂದೇನೂ ಇಲ್ಲ. ಅವರು ನಮ್ಮ ಮನೆ ಬಾಗಿಲಿಗೆ ಬರುವುದೂ ಉಂಟು. ಅವರು ಮನೆಮನೆಯ ದೇವರುಗಳು; ಸ್ಥಾನಿಕರಲ್ಲ.

ಜನಪದ ದೇವರುಗಳ ಕಾರ್ಯ ವೈಖರಿಯನ್ನು ಗಮನಿಸಿ : 1) ಮಗುವಿಗೆ ಕಣ್ಣು ನೋವಾಗಿದೆ. ತಾಯಿ ಊರ ಮುಂದೆ ಇರುವ ಕಲ್ಲು ದೇವರ ಹತ್ತಿರ ಬರುತ್ತಾಳೆ. ಆ ದೇವರಿಗೆ ಕೈಮುಗಿದು ಕೇಳುತ್ತಾಳೆ. ತಾಯಿ ನನ್ನ ಮಗುವಿನ ಕಣ್ಣು ಬೇನೆ ವಾಸಿಯಾದರೆ ನಿನಗೆ ಒಂದು ಜೊತೆ ಬೆಳ್ಳಿಯ ಕಣ್ಣು ಮಾಡಿಸಿ ಕೊಡುತ್ತೇನೆ ಎನ್ನುತ್ತಾಳೆ. ಆ ದೇವರಿಗೆ ಕಣ್ಣುಗಳಿಲ್ಲವೆ ಎಂದು ನಾವು ಕೇಳಲಾರೆವು. ತಾಯಿ ಆ ಬಗ್ಗೆ ತಿಳಿಯಳು. ಸದ್ಯ ತನ್ನ ಮಗುವಿನ ಕಣ್ಣು ಬೇನೆ ವಾಸಿಯಾಗಬೇಕು. ಇಲ್ಲಿ ಆ ದೇವತೆ ವೈದ್ಯೆಯಲ್ಲದೆ ಬೇರೆ ಅಲ್ಲ. ಬಹುತೇಕ ಜನಪದರ ಬೇಡಿಕೆಗಳು ಇದೆ ಸ್ವಭಾವದವು. ಮೋಕ್ಷವನ್ನು ಬೇಡುವುದು ಅಪರೂಪ. ಇದ್ದಷ್ಟು ದಿನ ಕಾಲ ಹಾಕಿ ಕಂತೆ ಬಿಸಾಕುವುದೆ ಜೀವನ ಎಂದು ತಿಳಿದುಕೊಂಡವರು.

ಜನಪದ ದೇವರು ಬಹಳ ದೊಡ್ಡವನು ಎಂದೇನೂ ಇಲ್ಲ. ಮನುಷ್ಯರಿಗಿಂತ ಸ್ವಲ್ಪ ಮೇಲೆ ಅಷ್ಟೆ. ದೇವರು ತಾನು ಕುರಿತದ್ದು ಕೊಡದಿದ್ದರೆ ಭಕ್ತ ಸಿಟ್ಟುಗೊಳ್ಳುತ್ತಾನೆ. ನಾನು ಹೇಳಿದ್ದು ಮಾಡುತ್ತೇನೆ, ಎಂದು ಒಪ್ಪಿಕೊಂಡಿದ್ದೀಯೆ. ಹಾಗೆ ಮಾಡದಿದ್ರೆ ಗಂಧದ ಕಡ್ಡಿ ಹಚ್ಚುವುದಿಲ್ಲ. ಬೆಂಕಿ ಕೆಂಡ ತಂದು ಅದರ ಮೇಲೆ ಮೆಣಸಿನ ಕಾಯಿ ಹಾಕಿ ಹೊಗೆ ಕೊಡುತ್ತೇನೆ ಎನ್ನುತ್ತಾನೆ. ಹೀಗೆ ದೇವರು ಆಗುವವನೂ ಉಂಟು ಆಗದವನೂ ಉಂಟು.

ದೇವರು ಎಂಥ ಸ್ನೇಹಿತ ಎನ್ನುವುದನ್ನು ಜಾತ್ರೆ, ಉತ್ಸವದಲ್ಲಿ

ನೋಡಬೇಕು. ತಾನು ಏನೇನು ಡ್ರಿಂಕ್ಸ್ ತೆಗೆದುಕೊಳ್ಳುತ್ತಾನೊ. ತಾನು ಏನೇನು ಅಗಿಯುತ್ತಾನೊ-ಜಗಿಯುತ್ತಾನೋ ಅದೆಲ್ಲವನ್ನೂ ದೇವರಿಗೆ ಎಡೆಯಾಗಿ ಇಡುತ್ತಾನೆ. ತಾನು ದಿನನಿತ್ಯ ಸೇದುವ ಬೀಡಿಯನ್ನು ಕೂಡ.

ಧರ್ಮ ಪರಿಪಾಲಿಸಿ

ಶ್ರೀಕೃಷ್ಣ ಧರ್ಮಕ್ಷಯವಾದಾಗ ನಾನು ಮತ್ತೆ ಹುಟ್ಟಿ ಬರುತ್ತೇನೆ ಎನ್ನುತ್ತಾನೆ. ಅವನೂ ಕೂಡ ಹುಟ್ಟು-ಸಾವಿನ ದೇವರು. ಜನಪದದಲ್ಲಿ ಹಾಗಿಲ್ಲ. ಕಾರ್ಯಸಾಧುವಾದರೆ ಆತ ಉಳಿಯುತ್ತಾನೆ ಇಲ್ಲವೆ ಮೂಲೆ ಸೇರುತ್ತಾನೆ. ಅವನು ಜನರ ವಾರಸುದಾರ ಅಲ್ಲ, ಯಜಮಾನ ಅಲ್ಲ ನೋಡಿಕೊಳ್ಳಲು, ಭೂಮಿ, ಮಳೆ, ಗಾಳಿ. ಇಂಥವು ಮಾತ್ರ ನಿತ್ಯ ದೇವತೆಗಳು. ಉಳಿದಂತೆ ದೇವರುಗಳು ಬರುತ್ತವೆ, ಹೋಗುತ್ತವೆ. ಅವುಗಳಿಗೆ ಪುನರ್‌ಜನ್ಮ ಇದೆ ಎಂದು ಯಾರೂ ತಿಳಿದಿಲ್ಲ. ತಮ್ಮ ದೇವರು ಪರಯೋಜನ ಇಲ್ಲ ಎಂದಾದರೆ ಬೇರೆ ದೇವರನ್ನು ಹುಡುಕಿಕೊಂಡು ಹೋಗುತ್ತಾರೆ ಇಲ್ಲವೆ ಬೇಕಾದವನೊಬ್ಬನನ್ನು ಹುಟ್ಟುಹಾಕುತ್ತಾರೆ. ಅವನು ಇರುವಷ್ಟು ದಿನ ಅವನ ಅದೃಷ್ಟ. ಅದು ಕೆಟ್ಟರೆ ಬಾಗಿಲು ಮುಚ್ಚಿ ಹೋಗುತ್ತಾರೆ. ಹೀಗೆ ಸಮಾಜದ ಚಲನಶೀಲತೆಯಂತೆ ದೇವರು ಕೂಡಲ ಚಲನಶೀಲ.

ಜನಪದರ ಬದುಕಿನಲ್ಲಿ ಧರ್ಮ ದೇವರು ಎಂಬುವು ಅವರ ಹೊರಗೆ ಇರುವುದಿಲ್ಲ. ಅವರ ಜೊತೆಗೆ ನಡೆದಾಡುತ್ತವೆ. ನೆರವಿಗೆ ಬರುತ್ತವೆ. ಅವು ದೊಡ್ಡದನ್ನೇನೂ ಕೇಳುವುದಿಲ್ಲ. ತಲೆ ಮೇಲೆ ಬೆಣ್ಣೆ ಒತ್ತಬೇಕು ಎಂದೇನೂ ಇಲ್ಲ. ಒಂದು ಹೂವು ಅಥವಾ ಒಂದು ಪತ್ರೆ ಸಾಕು. ದೇವರು ಧರ್ಮ ಎಂದರೆ ನೀವು ಉಳಿಸಿಕೊಳ್ಳುವುದರ ಮೇಲೆ.

ಜನಪದ ಧರ್ಮ

ಧರ್ಮ ಮನುಷ್ಯನಂತೆ ಸ್ವತಂತ್ರ ಅಸ್ತಿತ್ವವಲ್ಲ. ಅದು ಮನುಷ್ಯ ತನಗಾಗಿ ಮಾಡಿಕೊಂಡದ್ದು; ಮನುಷ್ಯ ಅದನ್ನು ಉಳಿಸಿದರೆ ಅದು ಉಳಿಯುತ್ತದೆ. ಅದರ ಅಗತ್ಯ ಏನು ಮತ್ತು ಯಾಕೆ ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದೇ ಧರ್ಮದ ಹುಡುಕಾಟವಾಗುತ್ತದೆ.

ಮನುಷ್ಯ ಧರ್ಮ, ಪುರಾಣ, ಕಥೆ, ಶಾಸ್ತ್ರ ಇಂಥವನ್ನೆಲ್ಲ ಯಾಕೆ ಸೃಷ್ಟಿಸಿಕೊಂಡ ಎಂಬುದು ದೊಡ್ಡ ಪ್ರಶ್ನೆ. ನಿಜದಲ್ಲಿ ಇವೆಲ್ಲ ಭೌತಿಕ ಜಗತ್ತಿನ ಹೊರಗೆ ಇಲ್ಲ. ಇವೆಲ್ಲ ಮನುಷ್ಯ ಭೌತಿಕ ಜಗತ್ತಿಗೆ ಬೇರೆ ಬೇರೆ ಕಾಲಗಳಲ್ಲಿ ತೋರಿದ ಪ್ರತಿಕ್ರಿಯೆಯ ಪರಿಣಾಮಗಳು. ಆದಿಮಾನವ ತನ್ನ ತಿಳುವಳಿಕೆಯ ಮಿತಿಯಲ್ಲಿ ಭೌತಿಕ ಜಗತ್ತಿಗೆ ಪ್ರತಿಕ್ರಿಯೆ ತೋರಿದ. ಈಗಿನ ಮಾನವ ತನ್ನ ಹೊಸ ಅರಿವಿನ ಸಂದರ್ಭದಲ್ಲಿ ಪ್ರಕೃತಿಗೆ ಪ್ರತಿಕ್ರಿಯೆ ನೀಡುತ್ತಿದ್ದಾನೆ. ಪ್ರಕೃತಿಯನ್ನು ಉಳಿಸುವ ಅಥವಾ ನಾಶಮಾಡುವ ಮೂಲಕ ತಾನು ಏನಾಗುತ್ತೇನೆ ಎಂಬುದನ್ನು ಕಂಡುಕೊಳ್ಳುತ್ತಿದ್ದಾನೆ. ಅಂದು ಆದಿಮಾನವ ಪ್ರಕೃತಿಗೆ ತೋರಿದ ಪ್ರತಿಕ್ರಿಯೆ ಯಿಂದಾಗಿ ತನಗಿಂತ ಪ್ರಬಲವಾದ ಶಕ್ತಿ ಮತ್ತು ಲೋಕ ಪ್ರಕೃತಿಯಲ್ಲಿದೆ ಎಂದು ಹೇಳಿಕೊಂಡ. ಆ ಹೇಳಿಕೊಂಡ ಕಥೆಯೆ ಅವನ ಪುರಾಣವಾಯಿತು. ಅದರೊಂದಿಗೆ ಹೊಂದಿಕೊಂಡು ಬದುಕುವ ನಡವಳಿಕೆಯೆ ಅವನ ಧರ್ಮವಾಯಿತು.

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪
E-mail : janapadaparishath@hotmail.com